ಮುತ್ತಿನ ಹಾರ

ಜೇಡರ ದಾಸಿಮಯ್ಯ

ಪ್ರೊ|| ಜಿ. ಅಶ್ವತ್ಥ ನಾರಾಯಣ



'ಮುತ್ತಿನಹಾರ ಮಾಲಿಕೆ'

ಜೇಡರ ದಾಸಿಮಯ್ಯ

ಆಯ್ಕೆ :
ಪ್ರೊ|| ಜಿ. ಅಶ್ವತ್ಥನಾರಾಯಣ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦೦೦೧

JEDARA DASIMAYYA - Selected Vachanas of Jedara Dasimayya, Selected by Prof. G. Ashwatha Narayana, Professor of Kannada (Retd.) Published by Karnataka Sahitya Academy, Nrupatunga Road, Bangalore - 560 001

First Impression : 1998

Price : Rs. 12/-   Pages : XVI + 48

ಪ್ರಕಾಶಕರು :
ಟಿ.ಎಸ್. ದಕ್ಷಿಣಾಮೂರ್ತಿ
ರಿಜಿಸ್ಟ್ರಾರ್,
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು - ೫೬೦ ೦೦೧

ಮುಖಪುಟ : ರಾ. ಸೂರಿ

ಮುಖಪುಟ ಮುದ್ರಣ : ದಿಕ್ಸೂಚಿ ಮುದ್ರಣಾಲಯ

ಮುದ್ರಕರು :
ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮೈನ್, ಅತ್ತಿಗುಪ್ಪೆ
ವಿಜಯನಗರ ೨ನೇ ಹಂತ
ಬೆಂಗಳೂರು - ೫೬೦ ೦೦೨

ಅಧ್ಯಕ್ಷರ ಮಾತು

'ಸುಡಿದರೆ ಮುತ್ತಿನಹಾರದಂತಿರಬೇಕು'

ಕನ್ನಡ ಸಾಹಿತ್ಯ ಪರಂಪರೆಯ ಪರಿಚಯವನ್ನು ಸದಾ ನಮ್ಮ ನೆನಪಿಗೆ ತಂದುಕೊಳ್ಳುವ ಉದ್ದೇಶದಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಮುತ್ತಿನಹಾರ ಮಾಲಿಕೆ' ಎಂಬ ಹೊಸ ಯೋಜನೆಯೊಂದನ್ನು ರೂಪಿಸಿದ್ದರ ಫಲ ಈ ಹೊತ್ತಗೆ. ಗಾತ್ರದಲ್ಲಿ ದೊಡ್ಡದಾದ ನಮ್ಮ ಸಾಹಿತ್ಯಕ ಕೃತಿಗಳನ್ನು ಈ ಹೊತ್ತಿನ ಎಲ್ಲ ಬಗೆಯ ಓದುಗರಿಗೆ ವಾಚನದಿಂದಲೇ ಮನನಕ್ಕೆ ಬರುವಂತೆ ಈ ಪುಸ್ತಕವನ್ನು ಸಿದ್ಧಪಡಿಸಲಾಗಿದೆ.

ನಮ್ಮ ಸಾಹಿತ್ಯ ಪರಂಪರೆಯ ಮಹತ್ವದ ಕೃತಿಗಳಿಂದ ಉಜ್ವಲವಾದ ಭಾಗಗಳನ್ನು ಸೂಕ್ತಿ-ಸೂಳ್ನುಡಿಗಳನ್ನು 'ಮುತ್ತಿನಹಾರ ಮಾಲಿಕೆ'ಯ ಕೃತಿಗಳಲ್ಲಿ ಸಂಗ್ರಹಿಸಲಾಗಿದೆ. ಈ ಆಯ್ಕೆಯು ಪರಿಸರ ಪ್ರೀತಿ, ಮಾನವ ಪ್ರೀತಿ, ಮನುಷ್ಯ ಸಂಬಂಧಗಳ ಉತ್ಕಟ ನೆಲೆಗಳು ಹಾಗೂ ಕನ್ನಡ ಸಂವೇದನೆಯ ಎಲ್ಲ ಜಾಗೃತ, ಜಾತ್ಯತೀತ, ಧರ್ಮ ನಿರಪೇಕ್ಷ ಮತ್ತು ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಒಳಗೊಂಡಿದೆ.

ಇಲ್ಲಿಯವರೆಗೆ ಈ ಮಾಲಿಕೆಯಲ್ಲಿ ೫೦ ಪುಸ್ತಕಗಳು ಪ್ರಕಟವಾಗಿವೆ. ಈವರೆಗೂ ಉಪೇಕ್ಷೆಗೆ ಒಳಗಾಗಿದ್ದ ತತ್ವಪದಕಾರರು ದೊಡ್ಡ ಪ್ರಮಾಣದಲ್ಲಿ ಬೆಳಕಿಗೆ ಬಂದುದು ಈ ಮಾಲಿಕೆಯಲ್ಲಿನ ವೈಶಿಷ್ಟ್ಯವಾಗಿದೆ. ರಾಮಪುರ ಬಕ್ಕಪ್ಪ, ಮೋಟ್ನಳ್ಳಿ ಹಸನಸಾಹೇಬ, ಕೊಳ್ಳೂರ ಹುಸನಾ ಸಾಹೇಬ, ಮಹಾಗಾಂವ ಮೀರಾಸಾಬ, ದ್ಯಾಗಾಯಿ ಗುಂಡಪ್ಪ, ಮುಂತಾದವರ ತತ್ವಪದಗಳು ಮೊಟ್ಟ ಮೊದಲು ಪ್ರಕಟಗೊಂಡಿರುವುದು ಈ ಮಾಲಿಕೆಯಲ್ಲಿಯೇ. ೧೭ ಮತ್ತು ೧೮ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಸೃಜನಶೀಲತೆ ಬತ್ತಿ ಮೌನವಾಗಿರದೆ ಶಕ್ತಿಯುತ ಧ್ವನಿಯಲ್ಲಿ ತನ್ನ ಪ್ರತಿಭೆಯನ್ನು ಪ್ರಕಟಿಸಿದೆ ಎನ್ನುವುದನ್ನು ಈ ತತ್ವಪದಕಾರರು ತೋರಿಸಿಕೊಟ್ಟಿರುವುದನ್ನು ಈ ಮಾಲಿಕೆ ದಾಖಲಿಸಿದೆ. ಈ ಮಾಲಿಕೆಗೆ ಓದುಗರು ತುಂಬು ಹೃದಯದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮತ್ತು ಸೂಕ್ತ ಸಲಹೆಗಳನ್ನೂ ನೀಡಿದ್ದಾರೆ.

೫೧ನೆಯ ಪುಸ್ತಕದಿಂದ ಹೊಸ ಸಂಪಾದಕ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಇನ್ನೂ ೫೦ ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ನಮ್ಮದಾಗಿದೆ.

ಪ್ರಸ್ತುತ 'ಜೇಡರ ದಾಸಿಮಯ್ಯ' ಪುಸ್ತಕವನ್ನು ತುಂಬ ಆಸ್ಥೆಯಿಂದ ಸಿದ್ಧಪಡಿಸಿಕೊಟ್ಟ ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ ಮುತ್ತಿನಹಾರ ಸಂಪಾದಕ ಮಂಡಳಿಯ ಪರವಾಗಿ ನನ್ನ ಧನ್ಯವಾದಗಳು.

ಶಾಂತರಸ
ಅಧ್ಯಕ್ಷರು

ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

ಶಾಂತರಸ

ಸಂಪಾದಕರು

ಡಾ. ಎಸ್. ವಿದ್ಯಾಶಂಕರ

ಡಾ. ಮಲ್ಲೇಪುರಂ ಜಿ. ವೆಂಕಟೇಶ್

ಶ್ರೀ ನಟರಾಜ ಬೂದಾಳು

ಶ್ರೀ ಪ್ರಭು ಖಾನಾಪುರೆ

ಸಂಚಾಲಕರು :

ಶ್ರೀ ಲಿಂಗರಾಜು

ಅರಿಕೆ

ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವ ಹಾಗೂ ಆಸ್ವಾದನೆ ಮಾಡುವ ರೀತಿ ಕಾಲಕಾಲಕ್ಕೆ ಜನಜೀವನ ಬದಲಾದಂತೆಲ್ಲಾ ಜನರ ಅಭಿರುಚಿಗಳು ಬದಲಿಸಿದಂತೆಲ್ಲಾ ಬೇರೆ ಬೇರೆ ಹಾದಿ ಹಿಡಿಯುತ್ತಿವೆ. ಒಂದು ಕಾಲದಲ್ಲಿ ಜನಜೀವನ ಸರಳವಿದ್ದು ಸಾಹಿತ್ಯಾಧ್ಯಯನಕಾರರಿಗೆ ಸಾಹಿತ್ಯಪ್ರಿಯರಿಗೆ ಸಾಕಷ್ಟು ಬಿಡುವು ಸಿಗುತ್ತಿತ್ತು. ಬೃಹದ್ಗ್ರಂಥಗಳ ಆಮೂಲಾಗ್ರ ವ್ಯಾಸಂಗ, ಶ್ರವಣ ಶಕ್ಯವಿರುತ್ತಿತ್ತು. ಚಂಪೂ-ಷಟ್ಪದಿ ಕಾವ್ಯಗಳನ್ನು ವಚನ-ದಾಸ ಸಾಹಿತ್ಯವನ್ನು ಪೂರ್ಣಾಧ್ಯಯನ ಮಾಡುತ್ತಿದ್ದರು. ಆಧುನಿಕ ಜನಜೀವನದಲ್ಲಿ ಕಾಲಾವಕಾಶ ದೊರೆಯುವುದೇ ದೊಡ್ಡ ಸಮಸ್ಯೆ. ಹಾಗೆಂದು ಎಲ್ಲ ಕಾಲದಲ್ಲೂ ಎಲ್ಲಾ ಜನರೂ ತಿಳಿದು ಆಸ್ವಾದಿಸಿ ಆನಂದಿಸಿ ಧನ್ಯರಾಗಬೇಕಾದ ಕನ್ನಡ ಸಾಹಿತ್ಯದಿಂದ ವಂಚಿತರಾಗಬೇಕಿಲ್ಲ. ಹಾಗಾಗಬಾರದು ಎಲ್ಲರಿಗೂ ಕನ್ನಡಸಾಹಿತ್ಯದ 'ರಸಘಟ್ಟಿ'ಗಳನ್ನು ದೊರೆಕಿಸುವ ದೃಷ್ಟಿಯಿಂದ 'ಮುತ್ತಿನಹಾರ' ಮಾಲಿಕೆಯು ಪ್ರಾರಂಭಗೊಂಡಿರುವುದು ಸ್ತುತ್ಯಾರ್ಹ ಕಾರ್ಯವಾಗಿದೆ. ಶ್ರೀಸಾಮಾನ್ಯರಿಗೆ ಸಾಹಿತ್ಯವಿಲ್ಲಿ 'ಗಿಂಡಿರಸ'ವಾಗಿ ದೊರೆಯುತ್ತಿದೆ. ಈ ಯೋಜನೆಯ ರೂವಾರಿಗಳಾದ ಶಾಂತರಸರನ್ನೂ ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವ ಸಂಪಾದಕವರ್ಗ ಮತ್ತು ಸಿಬ್ಬಂದಿ ವರ್ಗದವರನ್ನೂ ಅಭಿನಂದಿಸುತ್ತೇನೆ.

ದಾಸಸಾಹಿತ್ಯಕ್ಕೆ ಸಿದ್ಧರೂಪವನ್ನು ಕೊಟ್ಟು ಶ್ರೀಕಾರ ಹಾಕಿದ ಶ್ರೀಪಾದರಾಜರ ಹಾಗೆ ವಚನಸಾಹಿತ್ಯಕ್ಕೆ ಪ್ರಾರಂಭದಲ್ಲಿ ನೆಲೆಗಟ್ಟು ನಿರ್ಮಿಸಿದ ಜೇಡರದಾಸಿಮಯ್ಯ ನನ್ನ ಮೆಚ್ಚಿನ ವಚನಕಾರ. ಆತನ ವಚನಗಳು ನನಗೆ ಬಹುಪ್ರಿಯ. ಜೇಡರ ದಾಸಿಮಯ್ಯನ ವಚನಗಳನ್ನು ಸಂಗ್ರಹಿಸಿ ಸಂಪಾದಿಸಿ ಕೊಡಲು ಅವಕಾಶ ನೀಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಿಗೂ ಮತ್ತು ಸಂಪಾದಕ ವರ್ಗದವರಿಗೂ ನಾನು ಕೃತಜ್ಞ.

ಈ ಸಂಗ್ರಹವನ್ನು ಸಿದ್ಧಪಡಿಸುವಲ್ಲಿ ದೇವರ ದಾಸಿಮಯ್ಯ ಅರ್ಥಾತ್ ಜೇಡರ ದಾಸಿಮಯ್ಯನನ್ನು ಕುರಿತು ಪ್ರಕಟವಾದ ಗ್ರಂಥಗಳ ನೆರವನ್ನು ಪಡೆದಿದ್ದೇನೆ, ಆ ಎಲ್ಲ ಲೇಖಕರಿಗೂ ಸಂಪಾದಕರಿಗೂ ನನ್ನ ನೆನಕೆಗಳನ್ನು ಸಲ್ಲಿಸುತ್ತೇನೆ.

ವಚನಗಳನ್ನು ಆಯ್ಕೆಮಾಡಲು ಮುಖ್ಯವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದ ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟ-೭, ಸಂ. ಡಾ. ವಿದ್ಯಾಶಂಕರ ಸಂಗ್ರಹವನ್ನು ಆಧರಿಸಿದ್ದೇನೆ. ಅಂತೆಯೇ ವಚನಗಳಲ್ಲಿ ಬರುವ ಪಾರಿಭಾಷಿಕ ಅರ್ಥಗಳನ್ನು ನೀಡುವಲ್ಲಿಯೂ ಇದೇ ಸರಣಿಯ ಡಾ. ವಿದ್ಯಾಶಂಕರರಿಂದ ರಚಿತ 'ವಚನಪಾರಿಭಾಷಾ ಕೋಶ'ದಿಂದ ನೆರವನ್ನು ಪಡೆದಿದ್ದೇನೆ. ಅವರಿಗೆ ನನ್ನ ಧನ್ಯವಾದಗಳು. ಈಗಾಗಲೇ 'ಮುತ್ತಿನಹಾರ ಮಾಲಿಕೆ'ಯ ಗ್ರಂಥಗಳನ್ನು ಅತ್ಯಾದರದಿಂದ ಬರಮಾಡಿಕೊಂಡಿರುವ ಕನ್ನಡ ಜನರು ಈ ಕೃತಿಯನ್ನು ಸ್ವಾಗತಿಸುತ್ತಾರೆ ಎಂದು ನಂಬಿದ್ದೇನೆ.

- ಪ್ರೊ|| ಜಿ. ಅಶ್ವತ್ಥನಾರಾಯಣ

ಪ್ರಸ್ತಾವನೆ

"ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ದೇವರದಾಸಿಮಯ್ಯ ಮುದನೂರು ದಾಸಯ್ಯ" ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಜೇಡರದಾಸಿಮಯ್ಯನು ಬಸವಪೂರ್ವಯುಗದ ಪ್ರಸಿದ್ಧ ವಚನಕಾರ. ಈತನ ಎಲ್ಲ ಹೆಸರುಗಳಲ್ಲಿ ವಿಶೇಷವಾಗಿ ಬಳಸಲ್ಪಡುವ ಹೆಸರುಗಳು ಎರಡು ಮಾತ್ರ. ಒಂದು, ದೇವರ ದಾಸಿಮಯ್ಯ; ಇನ್ನೊಂದು ಜೇಡರ ದಾಸಿಮಯ್ಯ. ಈ ಹೆಸರುಗಳ ಪೈಕಿ ಜೇಡರ ದಾಸಿಮಯ್ಯ ಎಂಬ ರೂಪವೇ ಅತ್ಯಂತ ಪ್ರಾಚೀನ. ಜೇಡರ ದಾಸಿಮಯ್ಯನ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದವರೂ, ವಿಮರ್ಶೆ-ಪರಿಚಯಗಳನ್ನು ಬರೆದವರೂ ದೇವರ ದಾಸಿಮಯ್ಯ ಎಂಬ ಮಾತನ್ನೇ ಬಳಸಿರುವುದನ್ನು ಮರೆಯುವಂತಿಲ್ಲ. ಎಲ್. ಬಸವರಾಜು ಅವರು "ದೇವರ ದಾಸಿಮಯ್ಯ ಎಂದು ವ್ಯವಹರಿಸದೆ ಹೋದರೆ ಪ್ರಸ್ತುತ ಶರಣನ ಪ್ರತೀತಿಯಾಗದೆ ಹೋದೀತೇನೋ" ಎಂದಿದ್ದಾರೆ.

ಜೇಡರ ದಾಸಿಮಯ್ಯನನ್ನು ಬಸವಣ್ಣನವರಿಂದ ಹಿಡಿದು ಹತ್ತೊಂಬತ್ತನೆಯ ಶತಮಾನದ 'ಶಿವಶರಣ ವಿಲಾಸ' ರಚಕನಾದ ಮಹಂತ ದೇಶಿಕನವರೆಗೆ ಎಲ್ಲ ಶರಣರೂ ಕವಿಗಳೂ ಕೊಂಡಾಡಿರುವುದನ್ನು ಕಂಡಾಗ ಈತನ ಮಹತ್ವ ಎಷ್ಟೆಂದು ತಿಳಿಯುತ್ತದೆ. ಬಸವಣ್ಣನವರಂತೂ ಹಲವಾರು ವಚನಗಳಲ್ಲಿ ಈತನನ್ನು ಆದರ್ಶದ ರೀತಿಯಲ್ಲಿ ಬಣ್ಣಿಸಿದ್ದಾರೆ. "ಭಕ್ತಿ ಎಂತಹುದಯ್ಯ? ದಾಸಯ್ಯ ಮಾಡಿದಂತಹುದಯ್ಯ" (ಬ.ಷ.ವ. ೧೪೬) "ದಾಸಿಮಯ್ಯನಂತೆ ಉಡಕೊಡಬಲ್ಲನೇ?" "ನೆರೆನೆಂಬೊ ನೆರೆನಂಬೋ ದಾಸದುಗ್ಗಳೆಯರಂತೆ" ಇತ್ಯಾದಿಯಾಗಿ ಆತನ, ಭಕ್ತಿ ದಾನಗುಣ, ಮೊದಲಾದವನ್ನು ಮೆಚ್ಚಿದ್ದಾರೆ.

ಬಸವಣ್ಣನವರಿಗಿಂತ ಸ್ವಲ್ಪ ಹಿಂದೆ ಇದ್ದ ಜೇಡರ ದಾಸಿಮಯ್ಯನ ಕಾಲವನ್ನು ಕುರಿತು ವಿದ್ವಾಂಸರು ಸಾಕಷ್ಟು ಚರ್ಚೆ ನಡೆಸಿದ್ದರೂ ಖಚಿತಾಭಿಪ್ರಾಯಕ್ಕೆ

ಬರಲಾಗಿಲ್ಲ. ಶ್ರೀ ಗೋವಿಂದ ಪೈ ಅವರು ಕ್ರಿ.ಶ. ಸುಮಾರು ೯೮೦ರಲ್ಲಿ ಹುಟ್ಟಿ ಕ್ರಿ.ಶ. ೧೦೪೦ರಲ್ಲಿ ಶಿವೈಕ್ಯರಾಗಿರಬಹುದೆಂದು ತೀರ್ಮಾನಿಸಿದರೆ, ಎಚ್. ದೇವೀರಪ್ಪನವರು "ಸು. ಕ್ರಿ.ಶ. ೧೦೬೦ರಲ್ಲಿ ಜನ್ಮವೆತ್ತಿ ಕ್ರಿ.ಶ. ೧೧೫೦ರವರೆಗೆ ಜೀವಿಸಿದ್ದಿರಬೇಕು." ಎನ್ನುತ್ತಾರೆ. ಚಿದಾನಂದಮೂರ್ತಿ ಅವರು "ಆರನೆಯ ವಿಕ್ರಮಾದಿತ್ಯನ ಮೊಮ್ಮಗ ಜಗದೇಕಮಲ್ಲII ಎಂಬಾತ ಕ್ರಿ.ಶ. ೧೧೩೯-೪೯ರವರೆಗೆ ಆಳಿದ. ಆರನೆಯ ವಿಕ್ರಮಾದಿತ್ಯನ ತಮ್ಮ ಜಯಸಿಂಹ ಕ್ರಿ.ಶ. ೧೦೮೨ರವರೆಗೆ ಆಳಿದ. ಇವರಿಬ್ಬರ ಕಾಲದಲ್ಲಿಯೂ ಜೇಡರ ದಾಸಿಮಯ್ಯ ಇದ್ದ" ಎನ್ನುತ್ತಾರೆ. ಸದ್ಯಕ್ಕೆ ಬಸವಪೂರ್ವ ಯುಗದವನು ಎಂಬುದನ್ನು ಖಚಿತವಾಗಿ ಹೇಳಬಹುದಷ್ಟೆ.

ಕಲ್ಬುರ್ಗಿ ಜಿಲ್ಲೆಯಲ್ಲಿ ಅನೇಕ ಪುರಾತನ ದೇವಾಲಯಗಳಿರುವ ಮುದನೂರು ಗ್ರಾಮ ದಕ್ಷಿಣ ವಾರಣಾಸಿ ಎಂದು ಪ್ರಸಿದ್ಧಿ ಹೊಂದಿತ್ತು. ಜೇಡರ ದಾಸಿಮಯ್ಯ ಈ ಗ್ರಾಮದಲ್ಲಿ ಕಲಿಕಾಲದಂಡ ಕಾಮಯ್ಯ ಮತ್ತು ಶಂಕರಿ ಎಂಬ ದಂಪತಿಗಳ ಪುತ್ರನಾಗಿ ಜನಿಸಿದನು. ಇಲ್ಲಿಯೇ ಈತನ ಬಾಲ್ಯ ಕಳೆದಿರಬಹುದು. ಈ ಗ್ರಾಮದಲ್ಲಿ ಪ್ರಸಿದ್ಧ ರಾಮನಾಥ ದೇವಾಲಯದ ರಾಮನಾಥನೇ ಜೇಡರ ದಾಸಿಮಯ್ಯನ ಇಷ್ಟದೈವವಾಗಿದ್ದು ತನ್ನ ವಚನಗಳನ್ನು ಈ ಅಂಕಿತದಲ್ಲಿ ರಚಿಸಿದ್ದಾನೆ. ಬಾಲ್ಯದಲ್ಲಿಯೇ ಧಾರ್ಮಿಕ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದ ದಾಸಿಮಯ್ಯನು ಆ ಕಾಲಕ್ಕೆ ಪ್ರಸಿದ್ಧ ವೀರಶೈವಧರ್ಮ ಪ್ರಸಾರದ ಕೇಂದ್ರವಾಗಿದ್ದ ಶ್ರೀಶೈಲಕ್ಕೆ ಹೋಗಿ ಅಲ್ಲಿ ಚಂದ್ರಗುಂಡ ಶಿವಾಚಾರ್ಯರೆಂಬುವರಿಂದ ಹೆಚ್ಚಿನ ಶಿಕ್ಷಣದಲ್ಲಿ ನಿರತನಾಗಿದ್ದನು. ಕಾಲಕ್ರಮದಲ್ಲಿ ನೇಯ್ಗೆಯ ಸಂಕಣ್ಣ ಮತ್ತು ಶ್ರೀದೇವಿಯರ ಮಗಳು ದುಗ್ಗಳೆಯನ್ನು ಸತ್ವಪರೀಕ್ಷೆಗೆ ಒಳಪಡಿಸಿ ಮೆಚ್ಚಿ ಮದುವೆ ಆದನು.

ಶ್ರೇಷ್ಠಭಕ್ತರಾಗಿ ಅನುಭಾವಿಗಳಾಗಿ ಶಿವಜ್ಞಾನಿಗಳಾಗಿ ವೀರಶೈವ ಧರ್ಮಪ್ರಸಾರ ಕಾರ್ಯದಲ್ಲಿ ನಿರತರಾದ ದಾಸಿಮಯ್ಯ ದುಗ್ಗಳೆ ದಂಪತಿಗಳು ತಮ್ಮ ವಿಶಿಷ್ಟ ಸಾಧನೆ ಮತ್ತು ವ್ಯಕ್ತಿತ್ವದಿಂದ ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರಸಿದ್ಧರಾಗಿದ್ದರು. ಪೊಟ್ಟಿಲಕೆರೆ, ಮುದನೂರು ಮುಂತಾದ ಊರುಗಳು ವೀರಶೈವ ಧರ್ಮ ಪ್ರಸಾರದ ಕೇಂದ್ರಗಳಾಗಿದ್ದವು.

ಜೇಡರ ದಾಸಿಮಯ್ಯ ಮತ್ತು ದುಗ್ಗಳೆಯರದು ಆದರ್ಶ ದಾಂಪತ್ಯವಾಗಿತ್ತೆಂದು ಅನೇಕ ಗ್ರಂಥಗಳ ಉಲ್ಲೇಖಗಳಿಂದ ತಿಳಿಯುತ್ತದೆ. ಈ ಬಗೆಗೆ ಅನೇಕ ಕಥೆಗಳಿವೆ.

ಆ ಪೈಕಿ ಒಂದು ಧ್ವನಿ ಪೂರ್ಣಕತೆ ಹೀಗಿದೆ: ಒಮ್ಮೆ ಸಂಸಾರ ಮೇಲೋ? ಸಂನ್ಯಾಸ ಮೇಲೋ ಎಂಬ ಪ್ರಶ್ನೆಯನ್ನು ಜೇಡರ ದಾಸಿಮಯ್ಯನಿಗೆ ಒಡ್ಡಿದಾಗ ಅದಕ್ಕೆ ಉತ್ತರವಾಗಿ ಪ್ರಶ್ನೆ ಕೇಳಿದವರನ್ನು ಹತ್ತಿರದಲ್ಲಿ ಕೂಡಿಸಿಕೊಂಡು ಮಗ್ಗದ ಕಾಯಕದಲ್ಲಿ ನಿರತನಾಗಿದ್ದ ಅವನು ಆ ನಡು ಹಗಲಿನಲ್ಲಿ ಹೆಂಡತಿ ದುಗ್ಗಳೆಗೆ 'ದಾರ ಹರಿದಿದೆ. ದೀಪ ತಾ' ಎಂದಾಗ ಮಾತಾಡದೆ ತಂದಳು. ಈ ನಡುಹಗಲಿನಲ್ಲಿ ದೀಪವೇಕೆ ಎಂದು ಕೇಳಲಿಲ್ಲ. ಹತ್ತಿರದಲ್ಲಿಯೇ ಕೈಗೆಟುಕುವ ಹಾಗೆ ಕುಂಚಿಗೆ ಇದ್ದರೂ ಅದನ್ನು ತೆಗೆದುಕೊಡಲು ಹೇಳಿದಾಗ ಆಕೆ ತುಟಿಕ್ ಪಿಟಿಕ್ ಎನ್ನಲಿಲ್ಲ. ಊಟಕ್ಕೆ ಕುಳಿತಾಗ ಆರಿದ ಅಂಬಲಿಯನ್ನು ಅಂಬಲಿ ಸುಡುತ್ತಿದೆ ಎಂದಾಗ ಮೊರಬೀಸಿ ಆರಿಸಿದಳಂತೆ. ಹೀಗೆ ವಿಲಕ್ಷಣವಾಗಿ ದಾಸಿಮಯ್ಯ ವರ್ತಿಸಿದಾಗ ಏನೂ ಪ್ರತಿ ಹೇಳದೆ ಸೇವಾಭಾವದಿಂದ ಸುಗ್ಗಳೆ ವರ್ತಿಸಿದ್ದುದನ್ನು ಕಂಡು ಕಕ್ಕಾಬಿಕ್ಕಿಯಾದ ಆ ಜನರಿಗೆ ದಾಸಿಮಯ್ಯ ಹೇಳಿದ: 'ಇಂತಹ ಸ್ತ್ರೀ ಇದ್ದರೆ ಸಂಸಾರಲೇಸು. ಇಲ್ಲದಿದ್ದರೆ ಪ್ರತ್ಯುತ್ತರದ ಚಂಡಿ ಆದರೆ ಸಂನ್ಯಾಸವೇ ಲೇಸು'. ದಾಸಿಮಯ್ಯ ದುಗ್ಗಳೆ ಅವರ ದಾಂಪತ್ಯ ಸಾಮರಸ್ಯದಿಂದ ಇತ್ತು ಎಂಬುದನ್ನು ಈ ಕಥೆ ಧ್ವನಿಸುತ್ತದೆ.

ದಾಸಿಮಯ್ಯನ ಸುತ್ತಲೂ ಅನೇಕ ಕಥೆಗಳೂ ಪವಾಡಗಳು ಹಬ್ಬಿಕೊಂಡಿವೆ. ಹಲವಾರು ಗ್ರಂಥಗಳಲ್ಲಿ ಅವುಗಳ ನಿರೂಪಣೆಗಳನ್ನು ಕಾಣಬಹುದು. ಇವುಗಳಲ್ಲೆಲ್ಲಾ ಜೇಡರ ದಾಸಿಮಯ್ಯನ ಹಿರಿಮೆ ಮಹಿಮೆಗಳನ್ನು ಸಾರುವ ಮುಖ್ಯ ಘಟನೆ ಎಂದರೆ 'ತವನಿಧಿ ಪಡೆದ ಮತ್ತು ವಸ್ತ್ರದಾನ ಪ್ರಸಂಗ' ಒಮ್ಮೆ ಅಪೂರ್ವವೂ ಅದ್ಭುತವೂ ಸುಂದರವೂ ಆದ ವಸ್ತ್ರವನ್ನು ನೇಯ್ದು ದಾಸಿಮಯ್ಯ ಮಾರಲು ಸಂತೆಗೆ ತರುತ್ತಾನೆ. ಅದನ್ನು ಕಂಡವರೆಲ್ಲ ಅಚ್ಚರಿಪಟ್ಟು ಅದಕ್ಕೆ ಬೆಲೆಗಟ್ಟಲಾಗದೆ ಯಾರೂ ಕೊಳ್ಳದೆ ಹಿಂದಿರುಗುತ್ತಾರೆ. ವಸ್ತ್ರವನ್ನು ಹಿಡಿದು ಸಂತೆಯಿಂದ ಹಿಂತಿರುಗುತ್ತಿದ್ದಾಗ ಮಾರ್ಗಮಧ್ಯದಲ್ಲಿ ಶಿವನೇ ಚಳಿಗೆ ನಡುಗುತ್ತಿರುವ ವೃದ್ಧ ಜಂಗಮನಾಗಿ ಕಾಣಿಸಿಕೊಂಡು ಆ ದಿವ್ಯಾಂಬರವನ್ನು ಅಪೇಕ್ಷಿಸುತ್ತಾನೆ. ಸ್ವಲ್ಪವೂ ಚಿಂತಿಸದೆ ಅದನ್ನು ದಾಸಿಮಯ್ಯ ಜಂಗಮರೂಪಿ ಶಿವನಿಗೆ ನೀಡುತ್ತಾನೆ. ಅದನ್ನು ಚಿಂದಿಮಾಡಿ ಅವನು ಧರಿಸಿದಾಗ ದಾಸಿಮಯ್ಯ ಏನೂ ಮಾತಾಡುವುದಿಲ್ಲ. ಅನಂತರ ಆ ವೃದ್ಧನನ್ನು ತನ್ನ ಮನೆಗೆ ಕರೆದೊಯ್ದು ಸತ್ಕರಿಸಿ ಆತಿಥ್ಯ ನೀಡುತ್ತಾನೆ. ಇದರಿಂದ ತೃಪ್ತಿಗೊಂಡ ಆತ ತವನಿಧಿಯೊಂದನ್ನು ಜೇಡರ ದಾಸಿಮಯ್ಯನಿಗೆ ನೀಡುತ್ತಾನೆ. ತವನಿಧಿ ಪಡೆದ ಮೇಲೆ ಜೇಡರ ದಾಸಿಮಯ್ಯ ಗರ್ವಿಯಾಗುತ್ತಾನೆ. "ಶಿವನಂತೆ ಕೊಡುವವರಿಲ್ಲ ತನ್ನಂತೆ ಪಡೆದವರಿಲ್ಲ" ಎಂದು ಮೆರೆಯುತ್ತಾನೆ. ಆಗ ಆತನ ಗರ್ವಭಂಗಕ್ಕಾಗಿ

ಶಿವನಾಜ್ಞಾನುಸಾರ ಶಂಕರ ದಾಸಿಮಯ್ಯನೆಂಬ ಶರಣ ಅವನಿಗೆ ಬುದ್ಧಿ ಕಲಿಸುತ್ತಾನೆ. ಅನಂತರ ಸದ್ಭಕ್ತರಾಗಿ ಸವಿನಯವಂತಾಗಿ ಬಾಳುತ್ತಾರೆ. ಈಶ್ವರನಿಂದ ಪರೀಕ್ಷೆಗೆ ಒಳಗಾಗಿ ಈಶ್ವರಾನುಗ್ರಹದಿಂದಲೇ ಭಕ್ತರಾಗಿ ಬಾಳಿದವರು ಈ ದಂಪತಿಗಳು. ದಾಸನ ಕಾಲದಲ್ಲಿ ಶ್ರೇಷ್ಠರೆನಿಸಿಕೊಂಡರು.

ಕಲ್ಯಾಣೀ ಚಾಳುಕ್ಯ ರಾಜಮನೆತನದ ದೊರೆ ಜಗದೇಕಮಲ್ಲ ಜಯಸಿಂಹ (ಕ್ರಿ.ಶ. ೧೦೧೫-೧೦೪೨)ನ ರಾಜಧಾನಿ ಪೊಟ್ಟಲಕೆರೆ ಆಗಿತ್ತು. ಇಲ್ಲಿ ಜೇಡರ ದಾಸಿಮಯ್ಯ ಧರ್ಮ ಪ್ರಸಾರ ಕೈಗೊಂಡನು. ಜಯಸಿಂಹನ ರಾಣಿ ಸುಗ್ಗಲೆಯಿಂದ ಪ್ರಭಾವಿತಳಾದಳು ಎಂಬುದು ಐತಿಹಾಸಿಕ ಆಕರಗಳಿಂದ ತಿಳಿದುಬರುತ್ತದೆ.

ಒಟ್ಟಿನಲ್ಲಿ ಜೇಡರ ದಾಸಿಮಯ್ಯನು ಬಸವಪೂರ್ವಯುಗದ ಶರಣರಲ್ಲಿ ಪ್ರಸಿದ್ಧನಾದವನಾಗಿದ್ದನು. ಧರ್ಮ ಪ್ರಸಾರಿ, ತತ್ವನಿಷ್ಠ ವಚನಕಾರ, ಆದರ್ಶ ಜೀವಿ, ಪವಾಡ ಪುರುಷ ಏನೆಲ್ಲ ಆಗಿದ್ದು ಇತಿಹಾಸ ನಿರ್ಮಿಸಿದನು ಎನ್ನಬಹುದು.*

ವಚನಸಾಹಿತ್ಯಕ್ಕೆ ಪ್ರಾರಂಭದ ಕೊಡುಗೆ ನೀಡಿದವರಲ್ಲಿ ಜೇಡರ ದಾಸಿಮಯ್ಯನೇ ಅಗ್ರಗಣ್ಯ. "ಚಂಪೂ ತನ್ನೆಲ್ಲ ಸಾಧ್ಯತೆಗಳನ್ನು ಪ್ರಕಟಪಡಿಸಿ ಕಳಾಹೀನರಾಗಿದ್ದಾಗ ಸಾಹಿತ್ಯವು ಜನಸಮ್ಮುಖಿವಾಗಿ ಮರುಹುಟ್ಟು ಪಡೆಯಲು ಚಡಪಡಿಸುತ್ತಿತ್ತು. ಈ ವೇಳೆಗೆ ಶೈವಧರ್ಮವನ್ನು ಪರಿಷ್ಕರಿಸಿ ಅದಕ್ಕೊಂದು ಹೊಸ ರೂಪವನ್ನು ಕೊಡುವ ಪ್ರಯತ್ನವೂ ನಡೆಯಿತು. ಈ ಸಂಧಿಕಾಲದಲ್ಲಿ ಬಂದ ಪ್ರತಿಭಾಶಾಲಿ ಜೇಡರ ದಾಸಿಮಯ್ಯ ತಾಜಾತನದಿಂದ ಕೂಡಿದ ತನ್ನ ವಿಚಾರ ಪ್ರಣಾಲಿಯನ್ನು ಜನವಾಣಿ ಹಾಗೂ ದೇಸಿ ಛಂದಸ್ಸಿನಿಂದ ಹದವಾಗಿ ಪಾಕಗೊಳಿಸಿ ಮುಂದಣ ಶಿವಶರಣರಿಗೆ ದಾಸಿಮಯ್ಯ ಮಾರ್ಗದರ್ಶಿಯಾದನು."

ದಾಸಿಮಯ್ಯನ ವಚನಗಳು ಎಲ್ಲ ಬಗೆಯ ಸಾಧ್ಯತೆಗಳನ್ನು ಜೀವನವನ್ನು ಪರಿಶುದ್ಧಗೊಳಿಸಲು ಬೇಕಾದ ಮಾರ್ಗಸೂತ್ರಗಳನ್ನು ತಿಳಿಸಿದವು. ಪರಮಾತ್ಮ ಸ್ವರೂಪ, ಶರಣರ ಮಾತಿನ ಮಹತ್ವ, ಗುರುವಿನ ಲಕ್ಷಣ, ಭಕ್ತನ ಸ್ವರೂಪ, ದಾಸ್ಯಭಾವ ಮೊದಲಾದವೆಲ್ಲವನ್ನು ಸಂಕ್ಷಿಪ್ತವಾಗಿ ಸ್ವಾರಸ್ಯವಾಗಿ ಸರಳವಾಗಿ ಧಾಸಿಮಯ್ಯನು ತನ್ನ ವಚನಗಳಲ್ಲಿ ನಿರೂಪಿಸಿದ್ದಾನೆ. ಮುಂದಿನ ವಚನಕಾರರಿಗೆ ಮಾದರಿ ಆಗಿದ್ದಾನೆ; ಸ್ಫೂರ್ತಿ ನೀಡಿದ್ದಾನೆ.

---

* ಬಸವಪೂರ್ವದ ಶರಣರಲ್ಲಿ ದಾಸಿಮಯ್ಯನಂತೆಯೇ ಮೊದಲವಚನಕಾರ ಮಾದಾರ ಚನ್ನಯ್ಯ, ಕೊಂಡಗುಳಿ ಕೇಶಿರಾಜ, ಓಹಿಲಯ್ಯ ಮುಂತಾಗಿ ಇತರರೂ ಇರುವುದನ್ನು ಇಲ್ಲಿ ಗಮನಿಸಬೇಕಿದೆ. - ಸಂಪಾದಕರು

ಜೇಡರ ದಾಸಿಮಯ್ಯನ ವಚನಗಳಲ್ಲಿ ಪ್ರತಿಪಾದಿತವಾದ ಎಷ್ಟೋ ವಿಚಾರಧಾರೆ ಅನಂತರದ ವಚನಕಾರರ ವಚನಗಳಲ್ಲಿ ಭಿನ್ನ ಭಾಷೆಯಲ್ಲಿ ಕಾಣಿಸಿಕೊಂಡಿದೆ. ಉದಾಹರಣೆಗೆ:

ಸತಿಯರ ಸಂಗವನು ಅತಿಶಯದ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು ಅರಿವುಳ್ಳಡೆ
ಹೆಜಿರ ಕೈಯಿಂದ ಮಾಡಿಸುವರೆ ರಾಮನಾಥಾ

ಎಂಬ ವಚನದಲ್ಲಿ ಕಂಡು ಬರುವ ಅಭಿಪ್ರಾಯದ ಇನ್ನೊಂದು ರೂಪವನ್ನು ಬಸವಣ್ಣನವರ ಈ ಕೆಳಗಿನ ವಚನದಲ್ಲಿ ಕಾಣಬಹುದು:

ತನ್ನಾಶ್ರಯದ ರತಿಸುಖವನು ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲು ಮಾಡಿಸಲುಬಹುದೆ
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲು ಮಾಡಿಸಬಹುದೇ?
ಕೆಮ್ಮನುಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತಬಲ್ಲರು? ಕೂಡಲ
ಸಂಗಮದೇವಾ.

ಜೇಡರ ದಾಸಿಮಯ್ಯನವರ ವಚನಗಳ ಪ್ರಭಾವವನ್ನು ಬಸವಣ್ಣನವರ ವಚನಗಳಲ್ಲಿ ಕಾಣುವಂತೆಯೇ ಸರ್ವಜ್ಞನ ವಚನಗಳಲ್ಲೂ ಕಾಣಬಹುದು. ವಚನಗಳನ್ನು ಅಲ್ಪಸ್ವಲ್ಪ ಬದಲಾಯಿಸಿ ತ್ರಿಪದಿರೂಪ ಮಾಡಿದ್ದಾರೋ ಎಂಬಷ್ಟರ ಮಟ್ಟಿಗೆ ರೂಪ-ವಿಚಾರಗಳಲ್ಲಿ ಸಾಮ್ಯ ಕಂಡುಬರುತ್ತದೆ. ನಿದರ್ಶನಕ್ಕೆ ಒಂದು ವಚನ:

ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ
ಕರ್ತಾರ! ನಿನಗೆ ಕರವೆತ್ತಿ ಹೊಡವಡುವ
ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯಾ ರಾಮನಾಥ.

ಎತ್ತಾಗಿ ತೊತ್ತಾಗಿ। ಹಿತ್ತಲದ ಗಿಡವಾಗಿ
ಮತ್ತೆ ಪಾದದ ಕೆರವಾಗಿ। ಗುರುವಿನ
ಹತ್ತಲಿರು ಎಂದ ಸರ್ವಜ್ಞ.

ಇಂಥ ಹತ್ತಾರು ನಿದರ್ಶನಗಳನ್ನು ಜೇಡರ ದಾಸಿಮಯ್ಯನ ನಂತರದ ವಚನಕಾರರ ವಚನಗಳಲ್ಲಿ ಮತ್ತು ಇತರರ ರಚನೆಗಳಲ್ಲಿ ಕಾಣಬಹುದು. ಇದಕ್ಕೆ ಮುಖ್ಯ ಕಾರಣವೆಂದರೆ ಜೇಡರ ದಾಸಿಮಯ್ಯನ ವಚನಗಳಲ್ಲಿ ಕಂಡುಬರುವ ಸಂಕ್ಷಿಪ್ತತೆ, ಸರಳತೆ ಹಾಗೂ ಅರ್ಥಪ್ರಚುರತೆ; ಆಮೂಲಕ ವ್ಯಕ್ತಮಾಡುವ ವೀರಶೈವ ಧರ್ಮದ ಸುಸ್ಪಷ್ಟ ಸಂಗತಿಗಳು ಎನ್ನಬಹುದು.

ಶಿವಶರಣರು ಮಾತಿನ ಬಗ್ಗೆ ಮುತ್ತಿನಂಥ ನುಡಿಗಳನ್ನು ಹೇಳಿದ್ದಾರೆ. ಬಸವಣ್ಣನವರ 'ನುಡಿದರೆ ಮುತ್ತಿನಹಾರದಂತಿರಬೇಕು.....' ಮುಂತಾದ ಅನೇಕ ವಚನಗಳು ಇದಕ್ಕೆ ನಿದರ್ಶನವಾಗಿವೆ. ವಚನಗಳ ಗರಿಮೆ- ಹಿರಿಮೆಗಳನ್ನು ಕುರಿತು ಜೇಡರದಾಸಿಮಯ್ಯ ಹೇಳಿದ ವಚನಗಳು ಹೊರನೋಟಕ್ಕೆ ಸರಳವಾಗಿದ್ದರೂ ಒಳನೋಟಕ್ಕೆ ಮಾರ್ಮಿಕವಾಗಿವೆ. 'ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿಗಡಣವೆ ಕಡೆಗೀಲು' ಎನ್ನುವ ದಾಸಿಮಯ್ಯ ಶರಣರ ಸೂಳ್ನುಡಿಗಳ ಬೆಲೆ-ನೆಲೆಗಳನ್ನು ಕುರಿತು ಹೇಳುವ ಈ ವಚನ ಅತ್ಯಂತ ಸುಂದರ ವಚನಗಳಲ್ಲಿ ಒಂದಾಗಿದೆ:

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ! ರಾಮನಾಥಾ.

'ಕರಿ' 'ಸಿರಿ' ಹಿರಿದಪ್ಪ ರಾಜ್ಯಗಳನ್ನು ಲೋಕದಲ್ಲಿ ಎಲ್ಲರೂ ಬಯಸುವುದು ಸಹಜ. ಆನೆಯಂಬಾರಿಯ ವೈಭವ, ಅಷ್ಟೈಶ್ವರ್ಯದ ಭೋಗ, ಲೋಕದ ಸಮಸ್ತ ಸುಖಭೋಗಗಳನ್ನು ಅಂಗೈನೆಲ್ಲಿ, ಆಗಿರುವ ಹಿರಿದಪ್ಪ ರಾಜ್ಯ ಯಾರಿಗೆ ಬೇಡ? ಆದರೆ ಅದನ್ನು ಸುಜ್ಞಾನಿಗಳು ಬಯಸುವುದಿಲ್ಲ. ಅವೆಲ್ಲ ನಶ್ವರ. ಅಷ್ಟೆ ಅಲ್ಲ. ಲೋಕಹಿತ, ಜೀವದಯೆ, ಶಿವಾನುಗ್ರಹ ಅಲ್ಲಿ ಕಾಣಲಾರೆವುವು. ಅದಕ್ಕೆ, ಅವುಗಳೆಲ್ಲದರ ಬದಲಾಗಿ ಒಂದರಘಳಿಗೆ. ಕೆಲವು ನಿಮಿಷಗಳಾದರೂ ಸರಿ ಶರಣರ ಸೂಳ್ನುಡಿ ಕೇಳಿದರೆ ಶಿವನೇ ಸಾಕ್ಷಾತ್ಕಾರವಾದಂತೆ ಎನ್ನುತ್ತಾನೆ ಜೇಡರ ದಾಸಿಮಯ್ಯ. ಈ ವಚನದಿಂದ ಮತ್ತೊಂದು ಅಂಶ ತಿಳಿಯುತ್ತದೆ, ಜೇಡರ ದಾಸಿಮಯ್ಯನ ಕಾಲಕ್ಕೆ ಸಾಕಷ್ಟು ಶರಣರು ವಚನಗಳನ್ನು ರಚಿಸಿದ್ದರು ಇಲ್ಲವೇ ನುಡಿಯುತ್ತಿದ್ದರು.

ಅವುಗಳ ಪರಿಚಯ ಹಿರಿಮೆ, ಗೊತ್ತಿದ್ದ ಈತ ಅವುಗಳನ್ನು ಬಯಸುತ್ತಿದ್ದ ಎಂದು ತಿಳಿಯಬಹುದು.

ಜೇಡರ ದಾಸಿಮಯ್ಯನ ವಚನಗಳಲ್ಲಿ ಕಂಡುಬರುವ ಭಾಷೆಯ ಸೊಗಸು ಗಮನಾರ್ಹವಾದುದು. ಉಪಮೆ, ರೂಪಕ, ದೃಷ್ಟಾಂತ ಮೊದಲಾದವು ಪರಿಣಾಮಕಾರಿಯಾಗಿ ಪ್ರತಿಭಾಫಲಗಳಾಗಿ ಹೊರಹೊಮ್ಮುತ್ತವೆ. ಕಡೆಗೀಲನ್ನು ಶರಣರ ನುಡಿಗಡಣಕ್ಕೆ ಹೋಲಿಸುವುದರ ಔಚಿತ್ಯ ಅರ್ಥಪೂರ್ಣವಾದುದು. 'ಸತಿಪತಿಗಳೊಂದಾಗದ ಭಕ್ತಿ ಅಮೃತದೊಳು ವಿಷಬೆರಸಿದಂತೆ' ಎಂಬ ಉಪಮೆಯಾಗಲಿ "ಜಗದೊಳಗಣ ಮನುಜರು ಸೋಗೆಗನಂತಿದ್ದರು" ಎಂಬಲ್ಲಿ ಕಂಡುಬರುವ ಪ್ರತಿಮಾ ಸೌಂದರ್ಯವಾಗಲಿ 'ಹರಿದ ಗೋಣಿಯಲ್ಲೊಬ್ಬ ಕಳವೆಯ ತುಂಬಿದ' ದೃಷ್ಟಾಂತವಾಗಲಿ ಅಮೋಘವಾದುದು. ಜೇಡರ ದಾಸಿಮಯ್ಯನ ವಚನಗಳಲ್ಲಿ ಶ್ಲೇಷಾರ್ಥ ಪ್ರಾಸವೈಭವಗಳೂ ಸಾಕಷ್ಟು ಕಂಡುಬರುತ್ತವೆ. ಇವು ಕೇವಲ ಪಾಂಡಿತ್ಯ ಪ್ರದರ್ಶನವಾಗಿ ಬರುವದಿಲ್ಲ ಪ್ರಾಸಂಗಿಕವಾಗಿ ಸಹಜವಾಗಿ ಬರುತ್ತವೆ ಎಂಬುದನ್ನು ಗಮನಿಸಬೇಕು.

'ವೇಷವನೂ ವೇಶಿಯನೂ ಸರಿಯೆಂಬೆ, ಮಣಿವೊಡೆ ಶಿವಭಕ್ತ ಮಣಿಯಲೆಬೇಕು' ಎಂಬ ವಚನದ ನುಡಿಗಳಲ್ಲಿ ಕಾಣುವ ಶ್ಲೇಷೆ; 'ನೀನಿಸನೀಯದೆ ಮಾನೀಸನೀಯವನೆ' ಎಂಬ ವಚನದಲ್ಲಿ ಕಾಣುವ ಪ್ರಾಸ ಮಿಗಿಲಾದ ಚೇಲುವನ್ನು ತೋರುತ್ತವೆ. ಜೇಡರ ದಾಸಿಮಯ್ಯನ ವಚನಗಳ ಭಾಷಾ ಸೊಗಸನ್ನು ಕಂಡಾಗ "ದಾಸಿಮಯ್ಯನ ವಚನ ಶೈಲಿಯು ಸಕ್ಕರೆಯ ಸವಿಯಂತೆ ಸೊಗಸು. ಜೇನಿನಂತೆ ಮಧುರ. ಅದನ್ನು ನಾಲಗೆಯಿಂದ ರುಚಿಸಬಹುದಲ್ಲದೆ ನುಡಿದು ಹೇಳಲಾಗದು ಆತನ ಆ ವಚನಾಭ್ಯಾಸ ಅದೊಂದು ಅಮೃತಭೋಜನ" ಎಂಬ ನುಡಿ ಉತ್ಪ್ರೇಕ್ಷೆ ಅಲ್ಲ ಎನ್ನಿಸುತ್ತದೆ.

ಜೇಡರ ದಾಸಿಮಯ್ಯನ ವಚನಗಳಲ್ಲಿ ಭಕ್ತನನ್ನು ಮತ್ತು ಭಕ್ತಿಯನ್ನು ಕುರಿತ ವಚನಗಳು ಹೆಚ್ಚಾಗಿ ಮನ ಸೆಳೆಯುತ್ತವೆ. ಸದ್ಭಕ್ತನನ್ನು ವರ್ಣಿಸುವಂತೆಯೇ ಭಕ್ತನಲ್ಲದವನನ್ನೂ ಬಣ್ಣಿಸುತ್ತಾನೆ. ಇಬ್ಬರ ಲೋಕವರ್ತನೆಗಳನ್ನು ಸಾಕಷ್ಟು ವಿಸ್ತಾರವಾಗಿ ತಿಳಿಸುತ್ತಾನೆ. ಸದ್ಭಕ್ತರನ್ನು ಕುರಿತು "ಭಕ್ತನ ಮನೆಯ ಅಂಗಳವೆ ವಾರಣಾಸಿ ಕಾಣಾ" "ಶಿವಭಕ್ತರ ಒಡಲು ನಿನ್ನೊಡಲು" "ಅನುಭಾವ ಉಳ್ಳವರ

ಕಂಡು ತುರ್ಯ ಸಂಭಾಷಣೆಯ ಬೆಸಗೊಳ್ಳಬೇಕು", "ಸ್ತ್ರೀಯರ ಮೇಲಣ ಇಚ್ಛೆ ಕೆಟ್ಟಿತ್ತು ಈಶ್ವರ! ನಿಮ್ಮ ಪಾದಾಂಬುಜ ಸೇವೆಯಿಂದ ಕಾಣಾ" "ಇತ್ತ ಬಾ ಎಂಬ ಸದ್ಭಕ್ತನ ಮನೆಯ ಬಾಗಿಲ ಹತ್ತಿಪ್ಪೆ ಕಾಣಾ" "ಮೃಡಭಕ್ತರ ನುಡಿಗಡಣ ಕಡೆಗೀಲು" ಪೊಲಬುದೋರದ ನಿಸ್ಸಂಗದ ಹೊಲಬನರಿದು ಕೂಡಿದಾತನೆ ಶರಣ ಕಾಣಾ" "ವೇಷವ ಹೊತ್ತು ಲೋಕವ ಹಾರದಿರ್ದೊಡೆ ಆತನ ಈಶ್ವರನೆಂಬೆ" "ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ ವಸುಧೆಯೊಳಗೆ ಆತನೆ ಗಾರುಡಿಗ" ಇತ್ಯಾದಿಯಾಗಿ ದಾಸಿಮಯ್ಯ ಬಣ್ಣಿಸುತ್ತಾನೆ.

ಲೋಕದಲ್ಲಿ ಹಣ್ಣು ಹೂಕಾಯಿಗಳಿಗಿಂತ ಎಲೆಗಳೇ ಹೆಚ್ಚು ಗಿಡಮರಗಳಲ್ಲಿ. ಅಂತೆಯೇ ಸದ್ಭಕ್ತರಿಗಿಂತ, ಶರಣರಿಗಿಂತ ಅಸದ್ಭಕ್ತರು ಭವಿಗಳೇ ಹೆಚ್ಚು. ಸಾಕಷ್ಟು ವಚನಗಳಲ್ಲಿ ಜೇಡರ ದಾಸಿಮಯ್ಯ ಅಸದ್ಭಕ್ತರನ್ನು ಕುರಿತು ಅವರ ವರ್ತನೆಗಳ ಬಗ್ಗೆ, ಇಂಥವರ ಲಕ್ಷಣಗಳ ಬಗ್ಗೆ ತನ್ನ ವಚನಗಳಲ್ಲಿ ಪ್ರಸ್ತಾಪಿಸಿದ್ದಾನೆ.

"ಅರ್ಥವುಂಟೆಂದು ಅಹಂಕರಿಸಿ ಮಾಡುವವನ ಭಕ್ತಿ ತೊತ್ತಿನಕೂಟ ತೊರೆಯನ ಮೇಳದಂತೆ" ತನುಮನದಲ್ಲಿ ವಂಚನೆಯುಳ್ಳ "ಪ್ರಪಂಚಿಯ ಮನೆಯ ಕೂಳು, ಶುನಕನ ಬಾಯ ಎಲುವ ಪ್ರತಿ ಶುನಕ ತಿಂದಂತೆ"; "ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ ಈ ಲೋಕದ ಜಡರು ಬಲ್ಲವರಲ್ಲ" "ನೆರೆ ಛಲವಿಲ್ಲದೆ ಮಾಡಿದವನ ಭಕ್ತಿ ಆ ಇರುವೆಯಿಂದ ಕರಕಷ್ಟ"

"ಕಳ್ಳ ಹಾದರಿಗರ ಸಂಪಾದನೆ, ಹೊಳ್ಳ ಕುಟ್ಟಿ ಕೈ ಹೋಟೆಯಾದಂತೆ" "ಒಡಲಿಚ್ಛೆಗೆ ಬಡಮನವ ಮಾಡಿ ಹೊಕ್ಕುಂಬುವರನೆನಗೊಮ್ಮೆ ತೋರದಿರಾ!" "ನಿಮ್ಮನೊಲಿಸದ ಶರಣರಿಗೆ ತಲೆವಾಗದವನ ತಲೆ ಶೂಲದ ಮೇಲಣ ತಲೆ ಕಾಣಾ" "ನರಕದಲ್ಲಿ ಬೀಳುವ ಮನುಜರಿಗೆ ಶಿವಭಕ್ತಿಯೆಂಬುದು ಕರಗಹಿ" "ಮಾಯಾ ಮೋಹದಲ್ಲಿಪ್ಪ ಭಕ್ತರು ದೇವರನರಿಯರು" ಆಸೆಮಾಡಿದನಾದಡೆ ಅವ ದಾಸನ ಕುಲವಲ್ಲ ಅವ ಅನ್ಯಕುಲ" "ಬರುಸಟೆಗನ ಭಕ್ತಿ.... ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತೆ" "ಭಕ್ತಿಯ ಹೊಲಬನರಿಯದ ವ್ಯರ್ಥರಿಗೆ ಸತ್ಯ ಸದಾಚಾರವ ಹೇಳಿದಡೆ ಕಚ್ಚುವರು ಬಗಳುವರು ಕಾಣಾ" -ಹೀಗೆ ಪರಿಪರಿಯಾಗಿ ಅಸದ್ಭಕ್ತರು ಲೋಕದಲ್ಲಿ ವರ್ತಿಸುವ ರೀತಿನೀತಿಗಳನ್ನು ಜೇಡರ ದಾಸಿಮಯ್ಯ ಖಂಡಿಸಿ ಬಣ್ಣಿಸುತ್ತಾನೆ.

ಸ್ತ್ರೀಯರನ್ನು ಕಂಡರೆ ಜೇಡರ ದಾಸಿಮಯ್ಯನಿಗೆ ಅತಿ ಗೌರವ "ಗಂಡನುಳ್ಳಮ್ಮನ ಗೌರಿಯೆಂದು" ಕಾಣಬೇಕು. ಅಷ್ಟೇ ಅಲ್ಲ, "ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದರೆ, ಅವರ ಅರಸಿಯ ಪಾರ್ವತಿಯ ಸರಿಯೆಂದು ಕಾಣಬೇಕು" ಎನ್ನುತ್ತಾನೆ. ಇನ್ನೊಂದು ಸಂಗತಿ ಎಂದರೆ ಸ್ತ್ರೀ ಪುರುಷ ಸಮಾನತೆಯನ್ನು ಎತ್ತಿ ಹಿಡಿದದ್ದು. ಎಲ್ಲ ಶರಣರ ದೃಷ್ಟಿಯನ್ನೇ ಈತ ಇಲ್ಲಿ ಪ್ರತಿಪಾದಿಸಿದ್ದಾನೆ ಎನ್ನಬಹುದು. ಹೆಣ್ಣು ಗಂಡುಗಳ ನಡುವೆ ಸುಳಿವ ಆತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ" ಆದ್ದರಿಂದ ಆನಂದ ಸ್ವರೂಪಿ ಆತ್ಮ ಒಂದೇ. ಆ ಕಾರಣದಿಂದ ಹೆಣ್ಣು-ಗಂಡು ಭೇದ ಸಲ್ಲದು ಎಂದು ಹೇಳಿ ಸಮಾನತೆ'ಯನ್ನು ಎತ್ತಿ ಹಿಡಿದಿದ್ದಾನೆ.

ಸ್ವತಃ ಸಮರಸದ ದಾಂಪತ್ಯ ಜೀವನ ನಡೆಸಿದ ಜೇಡರ ದಾಸಿಮಯ್ಯ ದಂಪತಿಗಳಿಗೆ ಕೊಟ್ಟ ಹಿತೋಕ್ತಿ ಅನುಕರಣೀಯವಾದುದು. "ಸತಿ-ಪತಿಗಳೊಂದಾಗದವನ ಭಕ್ತಿ ಹಿತವಾಗಿಪ್ಪುದು ಶಿವಂಗೆ." ಇಲ್ಲದಿದ್ದಲ್ಲಿ ಅಮೃತದೊಳು ವಿಷ ಬೆರತಂತೆ ಆಗುತ್ತದೆ.

ಗುರು ಲಿಂಗ ಜಂಗಮ ತ್ರಯವನ್ನೂ ಕುರಿತು ಹೇಳಿದ್ದರೂ ಗುರುವಿಗೆ ಸಂಬಂಧಿಸಿದ ವಚನಗಳು ಉಳಿದವಕ್ಕಿಂತ ಸ್ವಲ್ಪ ಹೆಚ್ಚಿಗೆ ಕಂಡುಬರುತ್ತವೆ. ಗುರುವಿನ ಹಿರಿಮೆ, ಲಕ್ಷಣಗಳನ್ನು ಮಾರ್ಮಿಕವಾಗಿ ವಿವರಿಸುತ್ತಾನೆ ದಾಸಿಮಯ್ಯ.

ಗುರುವಿನ ಹಿರಿಮೆಯನ್ನು ಕುರಿತ ಈ ವಚನ ಸರಳವಾಗಿ ಹೊರನೋಟಕ್ಕೆ ಕಂಡರೂ ಅಂತರಾಳದಲ್ಲಿ ಅಗಾಧ ಅರ್ಥವನ್ನು ಒಳಗೊಂಡಿದೆ:

> ಉರಿಯ ಕೆಂಡದ ಮೇಲೆ ತೃಣವ ತಂದಿರಿಸಿದರೆ
> ಆ ತೃಣವ ಕೆಂಡ ನುಂಗಿದಂತೆ
> ಗುರುಚರಣದ ಮೇಲೆ ತನುತೃಣವನಿಳುಹಿದರೆ
> ಆತನ ಸರ್ವಾಂಗವೆಲ್ಲಾ ಲಿಂಗ ಕಾಣಾ ರಾಮನಾಥ!

ಸಸ್ಯತೃಣಕ್ಕೆ ತನುತೃಣವನ್ನು, ಗುರುಚರಣವನ್ನು ಉರಿವ ಕೆಂಡಕ್ಕೆ ಹೋಲಿಸಿರುವುದು ಇಲ್ಲಿ ಅರ್ಥಪೂರ್ಣವಾಗಿದೆ.

ಭಗವಂತನನ್ನು ವಿವಿಧ ರೀತಿಗಳಲ್ಲಿ ಜೇಡರ ದಾಸಿಮಯ್ಯ ಬಣ್ಣಿಸುತ್ತಾನೆ. ಅವ್ಯಕ್ತ ಆತ್ಮ ಸ್ವರೂಪವನ್ನು ಲೋಕಸೃಷ್ಟಿಯ ವೈಚಿತ್ರ್ಯವನ್ನು ಭಕ್ತರಿಗೆ ತೋರುವ

ಕರುಣೆಯನ್ನು ಭವಿಗಳಿಗೆ ಅಸದ್ಭಕ್ತರಿಗೆ ಕಾಣುವ ರೀತಿಯನ್ನು ಜಗತ್ತು ಜನ, ಸಕಲ ಚರಾಚರಗಳೆಲ್ಲ ಈಶಾವಾಸ್ಯಮಿದಂ ಸರ್ವಂ ಆಗಿರುವುದನ್ನು ಪರಿಣಾಮಕಾರಿಯಾಗಿ ಕೆಲವೇ ನುಡಿಗಳಲ್ಲಿ ನಿರೂಪಿಸುತ್ತಾನೆ. ಶಿವನನ್ನು ಕುರಿತು ಜೇಡರ ದಾಸಿಮಯ್ಯ ಎಷ್ಟು ಸರಳವಾಗಿ ಆದರೆ ಅಷ್ಟೇ ಪರಿಣಾಮಕಾರಿಯಾಗಿ ಸುಲಭದ ತಿಳಿಪದಗಳಲ್ಲಿ ವರ್ಣಿಸಬಲ್ಲ ಎಂಬುದಕ್ಕೆ ಈ ವಚನವೇ ಸಾಕ್ಷಿ:

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥ।

ದಾಸಿಮಯ್ಯನಲ್ಲಿ ಬೆಡಗಿನ ಸ್ವರೂಪದ ವಚನಗಳೂ ಇವೆ. ಆದರೆ ಅಲ್ಲಮನಲ್ಲಿ ಕಂಡುಬರುವಂತೆ ಹೆಚ್ಚಿನ ಪ್ರಮಾಣದಲ್ಲಿ ಇಲ್ಲ. ಸಾಕಷ್ಟು ಸರಳವಾದ ಬೆಡಗಿನ ವಚನಗಳು ಈತನಲ್ಲಿವೆ. ಉದಾಹರಣೆಗೆ ಈ ವಚನ ಗಮನಿಸಿ:

ಉಳುವನ-ಹೆಳವನ- ಕೊಲುವ ಬೇಡನ
ಹೆಳಲನಿಕ್ಕಿ- ಕರೆದುಂಬ ಭಕ್ತನ ಒಳಹನೇನೆಂಬೆ ರಾಮನಾಥ.

ಗುರುಲಿಂಗ ಜಂಗಮರನ್ನು ತೊಡಕು ಹಾಕಿ ಕರೆದು ಪ್ರಸಾದ ಸೇವಿಸುವ ಭಕ್ತನ ರೀತಿ ಇಲ್ಲಿ ವರ್ಣಿತವಾಗಿದೆ. ಹೀಗೆ ಶ್ರೇಷ್ಠ ವಚನಕಾರರಲ್ಲಿ ಕಂಡುಬರುವ ಶ್ರೇಷ್ಠಾಂಶಗಳೆಲ್ಲದರ ಮೂಲರೂಪದ ಬೀಜಾಂಕಾರಗಳನ್ನು ಜೇಡರ ದಾಸಿಮಯ್ಯನ ವಚನಗಳಲ್ಲಿ ಕಾಣಬಹುದು.

ಜೇಡರ ದಾಸಿಮಯ್ಯನ ವಚನಗಳು

೧

ಅಂಬಲಿ ಅಳೆಯಾಗಿ ತುಂಬೆಯ ಮೇಲೋಗರವಾಗಿ
ಉಂಬ ಸದುಭಕ್ತನ ಮನೆಯಾಗಿ
ಲೋಕದ ಡಂಭಕರ ಮನೆ ಬೇಡ, ರಾಮನಾಥ.

೨

ಅಗ್ನಿ ಸುಡಲಲ್ಲದೆ ಸುಳಿಯಲರಿಯದು
ವಾಯು ಸುಳಿವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೆ ಕ್ರಿಯಾ-ಜ್ಞಾನ ಭೇದವ?
ರಾಮನಾಥ.

೩

ಅಚ್ಚ ಶಿವೈಕ್ಯಂಗೆ ಹೊತ್ತಾರೆ ಅಮವಾಸ್ಯೆ ;
ಮಟ್ಟ ಮಧ್ಯಾಹ್ನ ಸಂಕ್ರಾಂತಿ ;
ಮತ್ತೆ ಅಸ್ತಮಾನ ಪೌರ್ಣಮಿ ಹುಣ್ಣಿಮೆ ಎಂಬವಿಲ್ಲ
ಭಕ್ತನ ಮನೆಯ ಅಂಗಳವೆ ವಾರಣಾಸಿ ಕಾಣಾ!
ರಾಮನಾಥ.

೪

ಅಿಡಗ ತಿಂಬರು; ಕಣಕದ ಅಡಿಗೆಯಿರಲಿಕೆ
ಕುಡಿವರು ಸುರೆಯ ಹಾಲಿರಲಿಕೆ
ಹಡದುಂಬ ವೇಶಿಯನೊಲ್ಲದೆ ಪೆರರ ಮಡದಿಗಳುಪುವ
ಸತ್ತನಾಯ ತಿಂಬ ಹಡ್ಡಿಗರನೇನೆಂಬೆನೈ ! ರಾಮನಾಥ.

೫

ಅಿಡಗಿನೊಳಗಣ ಹಾಲು ಅಡಗಿಪ್ಪ ಭೇದವನು
ಬೆಡಗಪ್ಪ ತುಪ್ಪದ ಕಂಪಿನ ಪರಿಯಂತೆ.
ಎಲೆ ಮೃಡನೆ! ನೀನು ಪ್ರಾಣ ಪ್ರಕೃತಿಗಳೊಳಗೆ
ಅಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ?
ರಾಮನಾಥ.

೬

ಅಿಡವಿ ಅರಣ್ಯದಲ್ಲಿ ಮಡಿವನಕ ತಪವಿದ್ದು
ಮಡಿವಾಗ ಮೃಡನ ಮರೆದಡೆ
ತುಂಬಿದ ಸಕ್ಕರೆಯ ಮಡುವಿನೊಳಗೊಕ್ಕಂತೆ ! ರಾಮನಾಥ.

೭

ಅಿಡವಿಯಂಗಡಿಯಕ್ಕು, ನಡುಗಡಲು ನೆಲೆಯಕ್ಕು,
ತೊಡಕುವ ಮಾರಿಯಪಮೃತ್ಯು
ಶಿವಭಕ್ತರ ಒಡಲು ನಿನ್ನೊಡಲೆಂದು
ಮುಟ್ಟಲಮ್ಮವು ಕಾಣಾ! ರಾಮನಾಥ.

೮

ಅಣುರೇಣು ಮಧ್ಯದ ಪ್ರಣವದಾಧಾರ
ಭುವನಾಧೀಶನೊಬ್ಬನೆಯಯ್ಯ.
ಇದೆ ಪರಿಪೂರ್ಣವೆಂದೆನ್ನದನ್ಯ ದೈವವ ಸ್ಮರಿಸುವ
ಭವಿಯನೆಂತು ಭಕ್ತನೆಂಬೆನೈ? ರಾಮೂಥ.

೯

ಅರ್ಥವುಂಟೆಂದು ಅಹಂಕರಿಸಿ ಮಾಡುವನ ಭಕ್ತಿ
ತೊತ್ತಿನ ಕೂಟ; ತೊರೆಯನ ಮೇಳದಂತೆ
ತನು ಮನ ಧನದಲ್ಲಿ ವಂಚನೆಯುಳ್ಳ
ಪ್ರಪಂಚಿಯ ಮನೆಯ ಕೂಳು
ಶುನಕನ ಬಾಯ ಎಲುವ ಪ್ರತಿಶುನಕ ತಿಂದಂತೆ ಕಾಣಾ!
ರಾಮನಾಥ.

೧೦

ಅನುಭಾವವಿಲ್ಲದ ಭಕ್ತಿ ತಲೆಕಳಗಾದುದಯ್ಯಾ
ಅನುಭಾವ ಭಕ್ತಿಗಾಧಾರ; ಅನುಭಾವ ಭಕ್ತಿಗೆ ನೆಲೆವನೆ
ಅನುಭಾವ ಉಳ್ಳವರ ಕಂಡು ತುರ್ಯಸಂಭಾಷಣೆಯ
ಬೆಸಗೊಳ್ಳದಿದ್ದಡೆ
ನರಕದಲ್ಲಿಕ್ಕಯ್ಯಾ! ರಾಮನಾಥ.

೧೧

ಆಡಬಾರದ ಬಯಲು; ಸೂಡಬಾರದ ಬಯಲು
ನುಡಿಯಬಾರದ ಬಯಲು, ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ.

೧೨

ಆದಿಪ್ರಕೃತಿಯ ಮಕ್ಕಳು ಅಂದಿನವರು
ಜೀವಪ್ರಕೃತಿಯ ಮಕ್ಕಳು ಇಂದಿನವರು
ಆದಿಪ್ರಕೃತಿಯ - ಜೀವಪ್ರಕೃತಿಯ
ಭೇದವ ಬಲ್ಲವರ ಪಾದವೆ ಗತಿಯೆನಗೆ, ರಾಮನಾಥ.

೧೩

ಆಸೆ ಪರಿಣಾಮಕ್ಕೆ ಬೇಸತ್ತು ಹೋಯಿತ್ತು
ಆಶ್ರಯದ ನಿದ್ರೆ ಕೆಟ್ಟಿತ್ತು; ಗ್ರಾಸ ಮೆಲ್ಲನಾಯಿತ್ತು
ಸ್ತ್ರೀಯರ ಮೇಲಣ ಇಚ್ಛೆ ಕೆಟ್ಟಿತ್ತು
ಈಶ್ವರ! ನಿಮ್ಮ ಪಾದಾಂಬುಜ ಸೇವೆಯಿಂದ ಕಾಣಾ!
ರಾಮನಾಥ

೧೪

ಇಂದಿಂಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ?
ತಂದಿಕ್ಕುವ ಶಿವಂಗೆ ಬಡತನವೆ? ರಾಮನಾಥ.

೧೫

ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ
ಇತ್ತ ಬಾ ಎಂಬ ಸದ್ಭಕ್ತನ ಮನೆಯ ಬಾಗಿಲ
ಹತ್ತಿಪ್ಪೆ ಕಾಣಾ ! ರಾಮನಾಥ.

೧೬

ಇರುಹೆಯ ತೆರನೇನು
ನೆರೆ ಥಳಿಪಿಲ್ಲಪಿಲ್ಲದೆ ಮಾಡಿದವನ ಭಕ್ತಿ
ಆ ಇರುಹೆಯಿಂದ ಕರಕಷ್ಟ ಕಾಣಾ ! ರಾಮನಾಥ.

೧೭

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥ.

೧೮

ಇಳೆಯನಾಧಾರವ ಮಾಡಿ
ಜಳವ ಜೀವನವ ಮಾಡಿ
ವಾಯುವ ಕಂಭವ ಮಾಡಿ
ಅನಳನ ಚಂದ್ರಮನ ಮಡಗಿ
ಆಕಾಶವನು ಗಳಿಗೆ ಮಾಡಿ
ಮುಚ್ಚಿ ಒಳಗಿಪ್ಪ ಭೇದವನು
ಭೇದಿಸದ ಬೆಡಗಿಗೆ ಆನು ಬೇಡಿಕೊಂಬೆ, ರಾಮನಾಥಾ.

೧೯

ಈಶ ! ನಿಮ್ಮ ಪೂಜಿಸಿದ ಬಳಿಕ
ಅನ್ಯದೈವಂಗಳಿಗೆ ಹೇಸಲೇಬೇಕು
ಹೇಸದೆ ಅನ್ಯದೈವಕ್ಕೆ ಆಸೆ ಮಾಡಿದರೆ
ಅವ ನಮ್ಮ ಈಶ್ವರಂಗೆ ಹೊರಗು
ದೋಷರಹಿತ ಭಕ್ತರು ಅವಂಗೆ
ಕುಲವೆಂದು ಕೂಸಕೊಟ್ಟು ಕೂಡುಂಡರೆ
ಮೀಸಲ ಬೋನವ ನಾಯಿ ಮುಟ್ಟಿದಂತೆ ಕಾಣಾ!
ರಾಮನಾಥ.

೨೦

ಉಂಕೆಯ ನಿಗುಚಿ, ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಳ ಮೆಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು
ಈ ಸೀರೆಯ ನೆಯ್ದವ ನಾನೋ ನೀನೋ? ರಾಮನಾಥ.

೨೧

ಉಣ್ಣೆ ಕೆಚ್ಚಲ ಹತ್ತಿ ಉಂಬದೆ ನೊರೆವಾಲ?
ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು
ಆ ಉಣ್ಣೆಯಿಂದ ಕರಕಷ್ಟ! ರಾಮನಾಥ.

೨೨

ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದಡೆ
ಆ ತೃಣವನು ಆ ಕೆಂಡ ನುಂಗುವಂತೆ
ಗುರುಚರಣದ ಮೇಲೆ ತನುತೃಣವನಿರಿಸಿದಡೆ
ಆ ತನುವೆಲ್ಲ ಲಿಂಗಮಯ ಕಾಣಾ! ರಾಮನಾಥ.

೨೩

ಉಳುವನ ಎಳೆವನ
ಉಳುವವನ, ಕೊಲುವ ಬೇಡನ
ಹಿಳಿಲನಿಕ್ಕಿ, ಕರೆದುಂಬ ಭಕ್ತನ
ಒಳುಹನೇನೆಯಿಬೆ ರಾಮನಾಥ.

೨೪

ಎಡರಡಸಿದಲ್ಲಿ ಮೃಡ! ನಿಮ್ಮ ನೆನೆವರು
ಎಡರಡಸಿದ ವಿಪತ್ತು ಕಡೆಯಾಗಲೊಡನೆ
ಮೃಡ! ನಿಮ್ಮನೆಡಹಿಯೂ ಕಾಣರು! ರಾಮನಾಥ.

೨೫

ಎಣ್ಣೆಯಿದ್ದು ಎಳ್ಳು ನನೆಯದ ಭೇದವ
ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ
ಕಾಮವಿದ್ದು ಕನ್ನೆಯನುಭವಿಸದ ಭೇದವ
ಪರವಿದ್ದು ಪ್ರಾಣನ ಪ್ರಕೃತಿಯ ಹರಿಯದ ಭೇದವ
ನರರೆತ್ತ ಬಲ್ಲರೈ? ರಾಮನಾಥ.

೨೬

ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ
ಸೊಣಗನಪ್ಪೆ
ಕರ್ತಾರ! ನಿನಗೆ ಕರವೆತ್ತಿ ಹೊಡೆವಡುವ
ಭಕ್ತರ ಮನೆಯ ಹಿತ್ತಲ ಬೇಲಿಯಾಗಿಪ್ಪೆನಯ್ಯಾ,
ರಾಮನಾಥ.

೨೭

ಎತ್ತು ನಿಮ್ಮ ದಾನ ; ಬಿತ್ತು ನಿಮ್ಮ ದಾನ
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳ? ರಾಮನಾಥ.

೨೮

ಎನ್ನ ನಾನರಿವುದಕ್ಕೆ ಮುನ್ನ ಎಲ್ಲಿದ್ದೆಯಯ್ಯ?
ಎನ್ನೊಳಗೆ ಇದ್ದೆಯಯ್ಯ!
ಎನ್ನ ನಾನರಿಯಲು ಮುಂದೆ ಬಂದು ಗುರುರೂಪಾಗಿ
ಎನ್ನೊಳಗೆ ಅಡಗಿದ್ದೆಯಲ್ಲ! ರಾಮನಾಥ.

೨೯

ಎನ್ನೊಡಲಾದಡೆ ಎನ್ನಿಚ್ಛೆಯಲ್ಲಿರದೆ?
ನಿನ್ನೊಡಲಾದಡೆ ನಿನ್ನಿಚ್ಛೆಯಲ್ಲಿರದೆ?
ಅದು ಎನ್ನೊಡಲೂ ಅಲ್ಲ; ನಿನ್ನೊಡಲೂ ಅಲ್ಲ
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ!
ರಾಮನಾಥ.

೩೦

ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?
ಜಳ್ಳ ತೂರಿದಲ್ಲಿ ಬತ್ತವುಂಟೆ?
ಕಳ್ಳಹಾದರಿಗರ ಸಂಪಾದನೆ
ಹೊಳ್ಳ ಕುಟ್ಟಿ ಕೈ ಹೋಟೆಯಾದಂತೆ ಕಾಣಾ! ರಾಮನಾಥ.

೩೧

ಒಂದಾಗಿಪವೈದು ಭೂತ,
ಚಂದ್ರಸೂರ್ಯರು, ನಂದಿವಾಹನ, ನಿಮ್ಮ ತನುವಲ್ಲವೆ?
ನಿಂದು ನೋಡಲು ಜಗಭರಿತನಾಗಿಪ್ಪೆ
ಇನ್ನು ನಿಂದಿಸುವೆನಾರನಯ್ಯ? ರಾಮನಾಥ.

೩೨

ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ
ಹತ್ತೆ ಕರೆದಿಕ್ಕಿದುದು ಪ್ರಸಾದವಲ್ಲ
ತರ್ಕೈಸಿ ನಿಮ್ಮುವನಪ್ಪಿಕೊಂಡಡೆ
ಅದು ನಿಶ್ಚಯಪ್ರಸಾದ ಕಾಣಾ! ರಾಮನಾಥ.

೩೩

ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರಾ!
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ! ರಾಮನಾಥ.

೩೪

ಒಡಲುಗೊಂಡೆನಾಗಿ ಮೃಡ! ನಿಮಗೆ ಹಗೆಯಾದೆನಯ್ಯ
ಆನು ಒಡಲುಗೊಂಡಡೇನು?
ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ
ಎನ್ನ ಒಡಲಳಿದು ಹೋದಡೇನು?
ಪ್ರಾಣ ನಿಮ್ಮ ಎಡೆಯಲಡಗುವುದಯ್ಯಾ! ರಾಮನಾಥ.

೩೫

ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ
ಮೃಡ! ನೀ ಪ್ರಾಣ- ಪ್ರಕೃತಿಯೊಳಗೆ ಅಡಗಿದ ಭೇದವ
ಲೋಕದ ಜಡರೆತ್ತ ಬಲ್ಲರೈ? ರಾಮನಾಥ.

೩೬

ಒಡೆಯರನೊಡಗೊಂಡು ಬಂದು
ಕೈಗಡಿಗೆಯ ನೀರ ಕೈಯಲ್ಲಿ ಕೊಟ್ಟು
"ಒಡೆಯರೇ! ಕಾಲ ತೊಳಕೊ" ಎಂಬವನ ಮನೆಗೆ
ಅಡಿಯಿಡಲಾಗದಯ್ಯಾ ಮೃಡಶರಣರು
ಒಡಲಿಚ್ಛೆಗೆ ಬಡಮನವ ಮಾಡಿ
ಹೊಕ್ಕುಂಬವರನೆನಗೊಮ್ಮೆ ತೋರದಿರಾ! ರಾಮನಾಥ.

೩೭

ಒರತೆಗಳ ಕಂಡಿಂತು ಕೆಲರು ಬಾವಿಯ ತೋಡೆಂಬರು
ಅರವಟಿಗೆ ಛತ್ರವು ತಮ್ಮದೆಂಬರು!
ಎಲೆ ಪಯಿರ್ಬೆದದಿರೆ, ಸುರಿವ ಮಳೆ ಸುರಿಸದದ್ದಡೆ
ಅವರೇತರಲ್ಲಿ ನೀಡುವರಯ್ಯಾ! ರಾಮನಾಥ.

೩೮

ಒಳಗರಿದ ಭಕ್ತನ ಒಳಗಾದ ಲಿಂಗವು
ಒಳಗಾದ ಲಿಂಗದೊಳಗಾದ ಭಕ್ತನು
ಹೊರಗಾದ ಲಿಂಗವ ಒಳಗೆ ತಂದಿರಿಸಿದಾ
ಭಕ್ತನ ತನುವಿನ ವಳಯವನಿನ್ನೇನ ಹೇಳುವೆ? ರಾಮನಾಥ.

೩೯

ಕಂಚು-ಮುಟ್ಟು-ಕಲ್ಲುಗುಂಡುಗಳೆರೆವಣ್ಣಗಳು, ನೀವು ಕೇಳಿರೆ!
ಘಂಟೆಯ ನುಡಿಸಿ ಶಿವನನುಂಟುಮಾಡಿಕೊಂಡಿಹೆನೆಂಬಿರಿ
ಆ ಘಂಟೆಯ ಧ್ವನಿಗೆ
ಒಂದು ಗೋಟಡಿಕೆಯ ಸೋಲ, ಗುರು ರಾಮನಾಥನು.

೪೦

ಕಡಿಗಳ ಹದಿನೆಂಟನೊಡಗೂಡಿ ಸಂಧಿಸಿ
ತೊಡಚಿ ಕಟ್ಟಿದೆ ನರರ ಬಂಧನದಲ್ಲಿ
ಈ ತೊಡೆಹದ ನಾಯ ನಿಚ್ಚ ನೀನಿಕ್ಕಿ
ಕೆಡಿಸಿದೆಯಯ್ಯಾ! ರಾಮನಾಥ.

೪೧

ಕಡು ಭಸಿತವ ಪೂಸಿ
ಮುಡಿಯಲ್ಲಿ ಲಿಂಗವ ಧರಿಸಿ
ಮಂತ್ರಮೂರ್ತಿಯ ಮನೆವಾರೆ ಪೂಜಿಸಿ
ಭಕ್ತಿವೇಷವ ಹೊತ್ತು ಭಕ್ತನೆನಿಸಿದ ಬಳಿಕ
ಭವಿಯ ಮನೆಯನ್ನವ
ನಾಯಡಗು, ನರರು ಹೇಸಿದ ಅಮೇಧ್ಯವೆಂದೇ ಕಾಣಬೇಕು
ಹೀಂಗಲ್ಲದೆ ಒಡಲಿಚ್ಛೆಗೆ ತುಡುಗುಣಿ ನಾಯಂತೆ
ಒಡಲ ಹೊರೆವವರ ಮೆಚ್ಚ ನಮ್ಮ ರಾಮನಾಥ.

೪೨

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಭಕ್ತರ ನುಡಿಗಡಣವೆ ಕಡೆಗೀಲು ಕಾಣಾ! ರಾಮನಾಥ.

೪೩

ಕಣ್ಣು ಮೀಸಲು ಶಿವನ,
ಕೈ ಮೊಸಲು ಶಿವನ

ಕಾಲು ಮೊಸಲು ಶಿವನ
ನಾಲಗೆ ಮೊಸಲು ಶಿವನ
ಕಿವಿ ಮೊಸಲು ಶಿವನ
ನಾಸಿಕ ಮೊಸಲು ಶಿವನ
ತನುಮನವೆಲ್ಲ ಮೀಸಲು ಶಿವನ
ಈ ಮೀಸಲು ಬೀಸರವಾಗದಂತಿರ್ದಡೆ
ಆತನೇ ಜಗದೀಶ ಕಾಣಾ! ರಾಮನಾಥ.

೪೪

ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ?
ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ?
ಭಕ್ತಿಯನರಿಯದ ವ್ಯರ್ಥಜೀವಿಗಳು
ನಿಮ್ಮವರನೆತ್ತ ಬಲ್ಲರೈ? ರಾಮನಾಥ.

೪೫

ಕರಸ್ಥಲದ ಜ್ಯೋತಿಯಿದು
ಕರುವಿಟ್ಟ ಎರಕವಿದು
ಇದರ ನೆಲೆಯ ತಿಳಿದು ನೋಡಿದಡೆ ನಿಜದಾನಂದವು
ಹೊಲಬುದೋರದ ನಿಸ್ಸಂಗದ ಹೊಲಬನರಿದು
ಕೂಡಿದಾತನೆ ಶರಣ ಕಾಣಾ! ರಾಮನಾಥ.

೪೬

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ! ರಾಮನಾಥ.

೪೭

ಕಳದೊಳಗಣ ಕಳವೆಯನೊಕ್ಕುವರೊಳರೆ?
ಶಿವಲಿಂಗ-ಮುಕ್ಕಣ್ಣ, ನೀನೊಲಿದ ಸದ್ಭಕ್ತನ
ಅಕ್ಕುಲಿಜನೆಂದೊಡೆ ಅಕ್ಷಯನರಕದಲ್ಲಿಕ್ಕುವ ಕಾಣಾ!
ರಾಮನಾಥ.

೪೮

ಕಾಯ ನಿಮ್ಮ ದಾನ; ಜೀವ ನಿಮ್ಮ ದಾನ
ಕಾಯ ಜೀವ ಉಳ್ಳಲ್ಲಿಯೇ ನಿಮ್ಮ ಪೂಜಿಸದ
ನಾಯಿಗಳನೇನೆಂಬೆ ಹೇಳ? ರಾಮನಾಥ.

೪೯

ಕೀಳು ಡೋಹರ ಕಕ್ಕ
ಕೀಳು ಮಾದರಚೆನ್ನ
ಕೀಳು ಓಹಿಲದೇವ
ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನು ಕರೆಯದು ಕಾಣಾ! ರಾಮನಾಥ.

೫೦

ಕುಲ ಛಲವ ಬಿಟ್ಟು ನಿಮ್ಮನೊಲಿಸಿದ ಶರಣರಿಗೆ
ತಲೆವಾಗುವೆ ನಾನು ಕುಲಜರೆಂದು
ಬೆಬ್ಬನೆ ಬೆರತು ನಿಮ್ಮನೊಲಿಸಿದ ಶರಣರಿಗೆ
ತಲೆವಾಗದವನ ತಲೆ ಶೂಲದ ಮೇಲಣ ತಲೆ ಕಾಣಾ!
ರಾಮನಾಥ.

೫೧

ಕುಲಸ್ವಾಮಿ ನೀ ನಿಂದ ಹಜ್ಜೆಯಲ್ಲದೆ
ನಾನೊಂದು ಹಜ್ಜೆಯನಿಡೆನಯ್ಯಾ
ಎನಗೊಂದು ಹಜ್ಜೆಯಿಲ್ಲ
ನಿನ್ನ ಹಜ್ಜೆ ಎನ್ನ ಹಜ್ಜೆ ಒಂದಾದ ಭೇದವ
ಜಗದನ್ಯಾಯಿಗಳೆತ್ತ ಬಲ್ಲರೈ? ರಾಮನಾಥ.

೫೨

ಕೆಡಹಿದ ಚಿನ್ನದ ಎಡೆಯಣ ಮಣ್ಣುವ
ಪೆಡಗೆದುಂಬಲಾ ಚಿನ್ನದೋರಿ
ಮೃಡ! ನಿಮ್ಮ ಶರಣರ ಎಡೆಗಳನರಿದ ಬಳಿಕ
ಉಡುಗಿದ ಮಣ್ಣೇಕೆ? ರಾಮನಾಥ.

೫೩

ಖಂಡಿತವಿಲ್ಲದ ಅಖಂಡಿತ ನೀನೆ
ನಿಮ್ಮ ಕಂಡವರುಂಟೆ? ಹೇಳಯ್ಯ
ಕಂಡೆನೆಂಬವರೆಲ್ಲ ಬಂಜೆಯ ಮಕ್ಕಳು
ನೀ ನಿಂದ ಹಜ್ಜೆಯ ಕೆಳಗೆ
ಒಂದು ಬಿಂದು ಹುಟ್ಟಿ ಬೆಳಗುವ ಚೆಂದವ ಕಂಡು
ಕಣ್ದೆರೆದೆ ಕಾಣಾ! ರಾಮನಾಥ.

೫೪

ಗಂಡನುಳ್ಳಮ್ಮನ ಗೌರಿಯೆಂದು ಕಂಡರೆ ಭೂ
ಮಂಡಲಕ್ಕೆ ಅರಸಾಗಿ ಹುಟ್ಟುವನಾತನು

ಗಂಡನುಳ್ಳಮ್ಮನ ಕಂಡು ಒಡವೆರೆದಾತ ನರಕದಲ್ಲಿ
ದಿಂಡುಗೆಡೆದಿಪ್ಪನೈ ರಾಮನಾಥ.

೫೫

ಗಂಡ ಭಕ್ತನಾಗಿ, ಹೆಂಡತಿ ಭವಿಯಾದಡೆ
ಉಂಡ ಊಟ ಇಬ್ಬರಿಗೂ ಸರಿಭಾಗ !
ಸತ್ತನಾಯ ತಂದಟ್ಟಮೇಲೆ ಇಳುಹಿ
ಒಬ್ಬರೊಪ್ಪಚ್ಚಿ ಹಂಚಿಕೊಂಡು ತಿಂಬಂತೆ ಕಾಣಾ ರಾಮನಾಥ.

೫೬

ಗಿರಿಗಳೆಲ್ಲ ಕೂಡಿ ಮೇರುಗಿರಿಗೆ ಸರಿಯಾಗಬಲ್ಲವೆ?
ತರುಗಳೆಲ್ಲ ಕೂಡಿ ಕಲ್ಪತರುವಿಂಗೆ ಸರಿಯಾಗಬಲ್ಲವೆ?
ಸರಿಯಿಲ್ಲ ನೋಡಾ
ನಮ್ಮ ಭಕ್ತರಿಗೆ ನರರು ಸುರರು ಸರಿಯಲ್ಲ ನೋಡಾ!
ಪರುಷಕ್ಕೆ ಪಾಷಾಣ ಸರಿಯೆ? ಮರುಜವಣಿಗೆ ಔಷಧ
ಸರಿಯೆ?
ಇದು ಕಾರಣ, ಶಿವಭಕ್ತರ್ಗೆ ಲೋಕದವರು ಸರಿಯೆಂದರೆ
ನರಕ ತಪ್ಪದಯ್ಯಾ, ರಾಮನಾಥ.

೫೭

ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು
ಮಾಯಾ ಪ್ರಪಂಚು ಬಿಟ್ಟಿತ್ತು
ಮುಂದಣ ಹುಟ್ಟರತು ಹೋಯಿತ್ತು
ನೆಟ್ಟಗೆ ಗುರುಪಾದವ ಮುಟ್ಟಿ, ಭವಗೆಟ್ಟೆನು ಕಾಣಾ!
ರಾಮನಾಥ.

೫೮

ಗುರು ನಿರೂಪವ ಮರೆದು
ಪರವಧುವ ನೆರೆವರು; ಪರಧನವನಳುಪುವರು;
ಗುರುವಿಲ್ಲವವರಿಗೆ ಪರವಿಲ್ಲವವರಿಗೆ
ಇಂತಪ್ಪ ನರಕಿಗಳನೆನಗೊಮ್ಮೆ ತೋರದಿರಾ, ರಾಮನಾಥ.

೫೯

ಗುರು ಲಿಂಗ ಒಂದೆಂಬರು
ಗುರು ಲಿಂಗ ಒಂದಾದ ಠಾವ ತಿಳಿದು ನೋಡಿರೆ
ಗುರು ಕಾರುಣ್ಯವಾದ ಬಳಿಕ
ಅಂಗದ ಮೇಲೆ ಲಿಂಗವಿರಬೇಕು
ಲಿಂಗವಿಲ್ಲದ ಗುರುಕಾರುಣ್ಯವು
ಬತ್ತಿದ ಕೆರೆಯಲ್ಲಿ ತಾವರೆಯ ಬಿತ್ತಿದಂತೆ ಕಾಣಾ!
ರಾಮನಾಥ.

೬೦

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು.
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ! ರಾಮನಾಥ.

೬೧

ಘಟವನೊಡೆದು ಬಯಲ ನೋಡಲದೇಕೆ?
ಘಟದೊಳಗಿಪ್ಪುದೆ ಬಯಲೆಂದರಿದಡೆ ಸಾಲದೆ?

ಘಟವ ಹರಿದು ತಂತುವ ನೋಡಲದೇಕೆ?
ಆ ಪಟವೆ ತಂತುವೆಂದರಿದಡೆ ಸಾಲದೆ?
ಕಟಕವ ಮುರಿದು ಕಾಂಚನವ ನೋಡಲದೇಕೆ?
ಆ ಕಟಕವೆ ಕಾಂಚನವೆಂದರಿದಡೆ ಸಾಲದೆ?
ತನ್ನನಳಿದು ಘನವ ನೋಡಲದೇಕೆ?
ತಾನೆ ಘನವೆಂದರಿದಡೆ ಸಾಲದೆ? ಹೇಳಾ, ರಾಮನಾಥ.

೬೨

ಚಿನ್ನದೊಳಗಣ ಬಣ್ಣ ಆ ಚಿನ್ನ ತನ್ನ ತಾನರಿವುದೆ?
ಕಬ್ಬು ರುಚಿಸಬಲ್ಲುದೆ ತನ್ನ ತಾನೆ?
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ?
ರಾಮನಾಥ.

೬೩

ಜಂಬೂದ್ವೀಪವನೆಲ್ಲ ತಿರುಗಿದಡೇನು?
ಜಂಬುಕ ಶಂಭುಧ್ಯಾನದಲ್ಲಿ ಸೈವೆರಗಪ್ಪುದೆ?
ಕುಂಭಿನಿಯ ತಿರುಗಿ ಕೋಟಿತೀರ್ಥವ ಮಿಂದಡೇನು?
ಶಂಭು! ನಿಮ್ಮಲ್ಲಿ ಸ್ವಯವಾಗದವನು
ಕುಂಭಿನಿಯ ತಿರುಗಿದ ಡೊಂಬನಂತೆ ಕಾಣಾ! ರಾಮನಾಥ.

೬೪

ಜಗದೊಳಗಣ ಮನುಜರು ಸೋಗೆಗನಂತಿಪ್ಪರು
ಸೋಗೆಗನನಾಡಿಸುವ ಓಜ ಬೇರೈ
ಸೋಗೆಗಳನೀಡಾಡಿ ಓಜ ತಾ ಹೋದರೈ
ಸೋಗೆಗ ನುಡಿಯಬಲ್ಲುದೆ? ರಾಮನಾಥ.

೬೫

ಜ್ವರಬಡಿದ ಬಾಯಿಗೆ ನೊರೆವಾಲು ಉರಿಸುವುದೆ?
ನರಕದಲ್ಲಿ ಬೀಳುವ ಮನುಜರಿಗೆ
ಶಿವಭಕ್ತಿಯೆಂಬುದು ಕರಗಹಿ ಕಾಣಾ! ರಾಮನಾಥ.

೬೬

ತನು ತನ್ನ ದೆಸೆಯಲೇಸು ದಿನವಿದ್ದಡೇನು?
ಮನ ತನ್ನ ಹರಿದತ್ತ ಹರಿದ ಬಳಿಕ
ಕೆನೆಯಿಲ್ಲದ ಮೊಸರ ಕಡೆದಡೆ ಅಲ್ಲಿ
ಒಂದು ಹನಿ ತುಪ್ಪವಿಲ್ಲ ಕಾಣಾ! ರಾಮನಾಥ.

೬೭

ತನ್ನೊಳಗಣ ಅರಿವು ತನ್ನಲ್ಲಿಯೆ ತೋರಿದಲ್ಲದೆ
ಅನ್ಯರಲ್ಲಿ ತೋರಬಲ್ಲುದೆ? ತನ್ನಲ್ಲಿ ತಾನೆ ಇದ್ದಿತ್ತು.
ತನ್ನ ತಾನೇ ಪಕ್ವಕ್ಕೆ ಬಂದು
ತನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನು ಏನೆಂಬೆನಯ್ಯಾ!
ರಾಮನಾಥ.

೬೮

ತಲೆಯಿಲ್ಲದ ಗುರು, ಕಾಲಿಲ್ಲದೆ ನಿಂದ ನೋಡ
ಒಡಲಿಲ್ಲದ ಶಿಷ್ಯನಾದ ಪರಿಯ ನೋಡ!
ಗುರುವಿನ ಒಢಲ ಬಗೆದು ಹುಟ್ಟಿದಾತ
ಒಡನೆ ಗುರುಸಹಿತ ನಿಂದ ನಿಲವನೇನೆಂಬೆನಯ್ಯಾ
ರಾಮನಾಥ.

೬೯

ತಾಯಗರ್ಭದ ಶಿಶು ತಾಯಕುರುಹನರಿಯದು
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು
ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ!
ರಾಮನಾಥ.

೭೦

ತೀವಿ ಕುಳ್ಳಿರ್ದ ಸಭೆ ಈಯಬಲ್ಲುದೆ ದಾನವ?
ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ?
ಇರಿಯಬಲ್ಲರೆ?
ನೂರಕ್ಕೊಬ್ಬ ಸಹಸ್ರಕ್ಕೊಬ್ಬ
ಹುಣಿಸೆಯ ಹೂವೆಲ್ಲ ಕಾಯಾಗಬಲ್ಲುದೆ? ರಾಮನಾಥ.

೭೧

ತೊಡೆಯಲ್ಲಿ ಮುದ್ರೆಯನೊತ್ತಿದಡೇನು,
ಅದು ನಡೆಯಲ್ಲಿ ಶುಚಿಯಾಗಬಲ್ಲುದೆ?
ಮಡಿಲಲ್ಲಿ ಲಿಂಗವ ಕಟ್ಟಿದ್ದಡೇನೊ,
ಲೋಕದ ಅಜ್ಞಾನಿತನ ಬಿಡುವುದೆ?
ನಡೆ ನುಡಿ ಸತ್ಯ ಸದಾಚಾರಿಗಳು
ಎಡೆಯೆಡೆಗೊಬ್ಬರು ಕಾಣಾ! ರಾಮನಾಥ.

೭೨

ದರುಶನ ತಪ್ಪುಕ ಪ್ರಥಮ ಪಾತಕ
ಸ್ಪರುಶನ ತಪ್ಪುಕ ದ್ವಿತೀಯ ಪಾತಕ

ಗುರುತಪ್ಪುಕ ತೃತೀಯ ಪಾತಕ
ಪಾರದ್ವಾರಿ ಚತುರ್ಥ ಪಾತಕ
ಮಾಂಸಹಾರಿ ಪಂಚಮ ಮಹಾಪಾತಕ
ಈ ಅಯ್ವರೊಡನೆ ನುಡಿಯಲಿಲ್ಲಯ್ಯ, ರಾಮನಾಥ.

೭೩

ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ
ಆಸೆ ಮಾಡ, ನೋಡ ಅನ್ಯದೈವಂಗಳಿಗೆ
ದೇಶದ ಪಿಶಾಚಗಳಿಗೆ ಆಸೆ ಮಾಡ ನೋಡ!
ಆಸೆ ಮಾಡಿದನಾದಡೆ ಅವ ದಾಸನ ಕುಲವಲ್ಲ
ಅವ ಅನ್ಯಕುಲ ಕಾಣಾ! ರಾಮನಾಥ.

೭೪

ದಾಸಿ, ವೇಶಿ, ಮದ್ದು, ಮಾಂಸ, ಸುರೆ, ಭಂಗಿ, ಹೊಗೆ
ಅನ್ಯದೈವ, ಭವಿಸಂಗ- ಇಷ್ಟುಳ್ಳನ್ನಕ್ಕ
ಅವ ಭಕ್ತನಲ್ಲ, ಜಂಗಮನಲ್ಲ
ಅವರಿಬ್ಬರ ಮೇಳಾಟವೆಂತೆಂದಡೆ
ಹೀಹಂದಿ ಹಡಿಕೆಯ ತಿಂದು
ಅವು ಒಂದರ ಮೋರೆಯನೊಂದು ಮೂಸಿದಂತೆ ಕಾಣಾ!
ರಾಮನಾಥ.

೭೫

ದೇಹಗೊಂಡು ಹುಟ್ಟಿದವರು
ಒಪ್ಪುಚ್ಚಿ ದೇಹಾರವ ಮಾಡುವಿರಯ್ಯ
ದೇಹಾರವ ಮಾಡಿ ಲಿಂಗಾರ್ಪಿತವ ಮಾಡದೆ

ಆಹಾರವ ಕೊಂಡಡೆ
ಕೋಳಿ ಹುಳುವನಾಯ್ದು ತಿಂದಂತೆ ಕಾಣಾ! ರಾಮನಾಥ.

೭೬

ಧರಣಿಯ ಪಸರಿಸಿ, ಉರಗನಡಿಯಿಟ್ಟು
ಶರಧಿಯೇಳಕ್ಕೆ ಎರೆದನೊಕ್ಕುಡಿತೆ ಉದಕವ
ಪರಿಯಜ ಸುರರಿಗೆ ಪರಿಪರಿಯ ಲೋಕವ ಕೊಟ್ಟು
ಅರಿಯದಂತಿರ್ದ ಕಾಣಾ! ರಾಮನಾಥ.

೭೭

ನಂಬಿ ನಚ್ಚಿದನೆಂದು ಮನವನಿಂಬುಗೊಡದಿರು
ಕಾಯದ ಮಾಯದ, ಕಪಟ ಕರ್ಮದ, ಸಂಸಾರಕ್ಕೆ
ತನು ಮನ ಧನದಲ್ಲಿ ನೆನಹುಳ್ಳವರ
ಕನಸಿನಲ್ಲಿ ಅರಿಯ, ನಮ್ಮ ರಾಮನಾಥ.

೭೮

ನಂಬಿದ ಚೆನ್ನನ ಅಂಬಲಿಯನುಂಡ
ಕೆಂಬಾವಿಯ ಭೋಗಯ್ಯನ ಹಿಂದಾಡಿಹೋದ
ಗುಂಡಯ್ಯನ ಕುಂಭದ ಗತಿಗೆ ಕುಕಿಲಿರಿದು ಕುಣಿದ
ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ.

೭೯

ನಡೆನೋಟ ಸೊಲ್ಲೆಡೆಯಲ್ಲಿ ಒಂದು ಕಿಚ್ಚು
ಮಡದಿ ಪುರುಷರೆಡೆಯಲ್ಲಿ ಒಂದು ಕಿಚ್ಚು

ತಡೆದುಂಬೆಡೆಯಲ್ಲಿ ಒಂದು ಕಿಚ್ಚು
ಪಡೆದರ್ಥ ಕೆಟ್ಟೆಡೆಯಲ್ಲಿ ಒಂದು ಕಿಚ್ಚು
ಕೂಡಿದ ವ್ಯಾಮೋಹದೆಡೆಯಲ್ಲಿ ಒಂದು ಕಿಚ್ಚು
ಇಂತೀ ಐದು ಕಿಚ್ಚನಿಕ್ಕಿ
ಬಾಯಲ್ಲಿ ಮಣ್ಣುಹೊಯಿದು ಕೆಡಿಸಿದೆ ಕಾಣಾ! ರಾಮನಾಥ.

೬೦

ನಾನೊಂಂದು ಸುರಗಿಯನೇನೆಂದು ಹಿಡಿವೆನು?
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ! ರಾಮನಾಥ.

೬೧

ನಿಡಿದೊಂದು ಕೋಲುವನು ಕಡಿದು ಎರಡು ಮಾಡಿ
ಅಡಿಯ ಹೆಣ್ಣಮಾಡಿ, ಒಡತಣದ ಗಂಡ ಮಾಡಿ
ನಡುವೆ ಹೊಸೆದಡೆ, ಹುಟ್ಟಿದ ಕಿಚ್ಚು ಹೆಣ್ಣೋ ಗಂಡೊ?
ರಾಮನಾಥ.

೬೨

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು?
ಅದು ಪಟ್ಟಣವೆಂದೆನಿಸುವುದು.
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ
ಅದು ನಟ್ಟಡವಿ ಕಾಣಾ! ರಾಮನಾಥ.

೬೩

ನೀನೀಸನೀಯದೆ ಮಾನೀಸನೀವನೆ
ನೀನೀಸುವ ಕಾರಣ ಮಾನೀಸನೀವನು

ಆ ಮಾನಿಸನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದ
ನೀನೆ ಶರಣೆಂಬೆನಯ್ಯಾ ರಾಮನಾಥ.

೮೪

ನೆರೆದರೆ ಗಣಂಗಳು
ಹರೆದರೆ ಕಂಚುಗಾರರು
ಲಿಂಗವ ಮಾರಿ ಉಂಬರೆ ಭೋಗಾರರು
ತಮ್ಮ ತಳಿಗೆಯ ಕೊಂಡು ಹೋಗಿ
ಅನ್ಯರ ಮನೆಯಲ್ಲುಂಬ ಕುನ್ನಿಗಳನೇನೆಂಬೆ? ರಾಮನಾಥ.

೮೫

ನೆರೆನಂಬಿ ಕರೆದಡೆ ನರಿಕುದುರೆಯಾಗಿ ಹರಿಯವೇ?
ಜಗವೆಲ್ಲಾ ಅರಿಯಲು ತೊರೆಯೊಳಗೆ ಬಿದ್ದ ಲಿಂಗ
ಕರೆದಡೆ ಬಂದುದು ಕರಸ್ಥಲಕ್ಕೆ
ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ.

೮೬

ಪರವಧುವ ನೆರೆಯದೆ; ಪರಧನವ ತುಡುಕದೆ
ಪರದೈವವದಿಚ್ಛೆವಡೆಯದೆ
ಗುರು ಲಿಂಗ ಜಂಗಮಕ್ಕೆ ವರದಾಸನಾದಾತನೆ
ಧರೆ ಮೂರಕ್ಕೆ ಗುರುವಾಗಿಪ್ಪನೈ, ರಾಮನಾಥ.

೮೭

ಪ್ರಾಣನ ಕಳೆ ಪ್ರಕೃತಿಯಲ್ಲಿ ಅಡಗಿ
ಪ್ರಕೃತಿಯ ಕಳೆ ಪ್ರಾಣನಲ್ಲಿ ಅಡಗಿ

ಲಿಂಗವೆಂದರಿದು ಅಂಗೈಸಿ ಅನುಭವಿಸಬಲ್ಲವರ
ಲೆಂಗಿ ನಾನಪ್ಪನೈ, ರಾಮನಾಥ.

೮೮

ಬರುಸಟೆಗನ ಭಕ್ತಿ ದಿಟವೆಂದು ನಚ್ಚಲು ಬೇಡ
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ! ರಾಮನಾಥ.

೮೯

ಬಿಂದುವಿನೊಳಗೆ ನಾದ ಹೊಂದಿರ್ದ ಭೇದವನು
ಲಿಂಗದೊಳಗೆ ಶರಣ ಸಂದಿರ್ದ ಭೇದವನು
ಲೋಕದ ಸಂದೇಹಿಗಳೆತ್ತ ಬಲ್ಲರೈ? ರಾಮನಾಥ.

೯೦

ಬೆಕ್ಕು ನಾಯಿ ಶಿವಭಕ್ತರೊಕ್ಕು ಮಿಕ್ಕುದ ಕೊಂಡಡೆ
ಸದಾಚಾರಿಯಾಗಬಲ್ಲುದೆ?
ಭೃತ್ಯಾಚಾರಿಯಾಗಬಲ್ಲುದೆ?
ಜಂಗಮಲಿಂಗದಲ್ಲಿ ನಂಬುಗೆಯಿಲ್ಲದೆ
ಒಕ್ಕುಕೊಂಡ ಪ್ರಸಾದ
ಬೆಕ್ಕು ನಾಯಿ ತಿಂದಂತೆ ಕಾಣಾ, ರಾಮನಾಥ.

೯೧

ಭಕ್ತನ ಮಠವೆಂದು ಭಕ್ತ ಹೋದಡೆ
ಆ ಭಕ್ತ ಭಕ್ತಂಗೆ ಅಡಿಯಿಟ್ಟು ಇದಿರೆದ್ದು ನಡೆದು
ಪೊಡೆಗೆಡೆದು ಒಡಗೊಂಡು ಬಂದು
ವಿಭೂತಿ ವೀಳ್ಯವನಿಕ್ಕಿ ಪಾದಾರ್ಚನೆಯಂ ಮಾಡಿಸಿ
ಒಕ್ಕುದ ಕೊಂಡು ಓಲಾಡುತ್ತಿಪ್ಪುದೆ ಭಕ್ತಿ

ಹೀಂಗಲ್ಲದೆ ಬೆಬ್ಬನೆ ಬೆರತು, ಬಿಬ್ಬನೆ ಬೀಗಿ
ಅಹಂಕಾರ ಭರಿತನಾಗಿಪ್ಪವನ ಮನೆಯ
ಲಿಂಗ ಸನುಮತರು ಹೊಗರು ಕಾಣಾ! ರಾಮನಾಥ.

೬೨

ಭಕ್ತಿಯ ಬಲ್ಲವರಿಗೆ ಸತ್ಯ ಸದಾಚಾರವ ಹೇಳಿದಡೆ
ನಂಬುವರು, ನಚ್ಚುವರು, ಮಚ್ಚುವರು,
ಭಕ್ತಿಯ ಹೊಲಬನರಿಯದ ವ್ಯರ್ಥರಿಗೆ
ಸತ್ಯಸದಾಚಾರವ ಹೇಳಿದಡೆ
ಕಚ್ಚುವರು, ಬಗಳುವರು ಕಾಣಾ! ರಾಮನಾಥ.

೬೩

ಮಂಡೆಯ ಬೋಳಿಸಿಕೊಂಡು
ಮಡಿದು ಗೋಸಿಯ ಕಟ್ಟಿದಡೇನು?
ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ
ಭಂಡರನೊಲ್ಲನೆಮ್ಮ ರಾಮನಾಥ.

೬೪

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?
ಒಡೆಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?
ನೀ ತೊಡಕಿಕ್ಕಿದ ತೊಡಕನೀ
ಲೋಕದ ಜಡರೆತ್ತ ಬಲ್ಲರೈ? ರಾಮನಾಥ.

೬೫

ಮಣಿಗಣ ಸೂತ್ರದಂತೆ ತ್ರಿಣಯನ ನೀನಿಪ್ಪೆಯಯ್ಯ
ಎಣಿಸುವಡೆ ತನು ಭಿನ್ನ; ಆತ್ಮನೊಬ್ಬನೆ.

ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿವುತಿಪ್ಪೆನಯ್ಯಾ, ರಾಮನಾಥ.

೯೬

ಮನಮುಟ್ಟಿ ನೆನೆವಲ್ಲಿ ತನು ನಿಮ್ಮದಾಯಿತ್ತು
ತನುಮುಟ್ಟಿ ಅಪ್ಪಿ, ಮನಮುಟ್ಟಿ ನೆರೆದು
ವನಿತೆಯರ ಕೂಟಕ್ಕೆ ತೆರಪಿಲ್ಲವಾಯಿತ್ತು.
ಜನನ-ಮರಣದ ಬಾಧೆ ಹರಿಯಿತ್ತು
ಈಶ್ವರ, ನಿಮ್ಮ ಪಾದಸೇವೆಯಿಂದ ಕಾಣಾ! ರಾಮನಾಥ.

೯೭

ಮನೆಯಲ್ಲಿ ಅಟ್ಟೆನೆಂದೆಡೆ ಹೊಟ್ಟೆ ತುಂಬಿದುದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ!
ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?
ಇಲ್ಲ ಕಾಣಾ! ರಾಮನಾಥ.

೯೮

ಮಾಡಿದ ಕರ್ಮವ ನೋಡಯ್ಯ
ಎನ್ನ ಮನ ದಣಿವನ್ನಕ್ಕ
ಬೇಡೆನ್ನೇನು, ಮಾರ್ಕೊಳ್ಳೆನು
ಎಲೆ ರೂಢಿಗೀಶ್ವರನೆ, ಕೂಡುವೆನು ನೀರಡಿಸಿದಂತೆ,
ರಾಮನಾಥ.

೯೯

ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ

ಶರೀರದೊಳಗಾತ್ಮನನಾರೂ ಕಾಣದಂತಿರಿಸಿದೆ
ನೀ ಬೆರಸಿದ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ.

೧೦೦

ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ
ಗೋರಿಗೊಳಿಸಿ ಕುರಿಯ ಕೊರಳನೆ ಕೊಯ್ದುಂಬ
ಕ್ರೂರಕರ್ಮಿಗಳನವರ ಶಿವಭಕ್ತರೆನ್ನಬಹುದೆ?
ಆರಯ್ಯದೆ ಅವನ ಮನೆಯಲುಂಡ ಭಕ್ತ
ಅಘೋರ ನರಕಕ್ಕಿಳಿವ ಕಾಣಾ! ರಾಮನಾಥ.

೧೦೧

ಮೆಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೆ?
ಮೆಳೆ ಶಿವಭಕ್ತನಾಗಬಲ್ಲುದೆ?
ನಿಮ್ಮ ತನುಮನ ಧನವನರಿಯದಿದ್ದಡೆ
ಸದುಭಕುತರಹರೆ? ರಾಮನಾಥ.

೧೦೨

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮನಾಥ.

೧೦೩

ವಿಷಯದ ಪಿತ್ತ ತಲೆಗೇರಿದಲ್ಲಿ
ವಿವೇಕವೆಂಬ ದೃಷ್ಟಿ ನಷ್ಟವಾಗಿ
ಪಶುಪತಿಯ ನೆನಹುಗೆಟ್ಟು
ಮತಿ ಮಂದವಾದಲ್ಲಿ
ಮಂತ್ರದ ನೆನಹುಂಟೆ? ಹೇಳಾ! ರಾಮನಾಥ.

೧೦೪

ವೇಷದ ಕೂಡೆ ವಾಸಿಗೆ ಹೋರುವವನು ಈಶ್ವರದ್ರೋಹಿ
ವೇಷವ ಈಶ್ವರನೆಂದು ತಿಳಿಯದವ
ಪಾಶಕ್ಕೆ ಸಿಕ್ಕಿದ ಪಶುವಿನಂತೆ ಕಾಣಾ! ರಾಮನಾಥ.

೧೦೫

ವೇಷವ ಹೊತ್ತ ಹಿರಿಯರು ಈಶ್ವರಧ್ಯಾನದಲ್ಲಿರಬೇಕು.
ವೇಷವ ತೋರಿ ಗ್ರಾಸಕ್ಕಾಗಿ ಆಸೆಮಾಡಿ
ಲೋಗರ ಮನೆಯ ಕಾದು ಗ್ರಾಸವ ಪಡೆದು
ಉದರವ ಹೊರೆವ ವೇಷವು
ವೇಶಿಯಿಂದವು ಕರಕಷ್ಟ! ರಾಮನಾಥ.

೧೦೬

ವೇಷವನೂ ವೇಶಿಯನೂ ಸರಿಯೆಂಬೆ
ವೇಷವು ಲೋಕವ ಹಾರುವುದು
ವೇಶಿಯೂ ಲೋಕವ ಹಾರುವಳು
ವೇಷವ ಹೊತ್ತು ಲೋಕವ ಹಾರದಿರ್ದಡೆ
ಆತನ ಈಶ್ವರನೆಂಬೆ ಕಾಣಾ! ರಾಮನಾಥ.

೧೦೭

ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ
ಅಂಬರಕ್ಕೆ ಗಡಿಗೆ ಬೋದಿಗೆಯಿಲ್ಲದಂತಿರಿಸಿದೆ
ಎಲೆ ಮೃಡನೆ! ನೀನಲ್ಲದೆ ಉಳಿದ ದೈವಂಗಳಿಗಹುದೆ?
ರಾಮನಾಥ.

೧೦೮

ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದಡೆ
ಅವರರಸಿಯ ಪಾರ್ವತಿಯ ಸರಿಯೆಂದು ಕಾಣಬೇಕು
ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ
ಮಾತನಾಡುವ ನರಕಿಗಳನೇನೆಂಬೆ, ರಾಮನಾಥ.

೧೦೯

ಶ್ರೀಗುರು ಲಿಂಗ ಜಂಗಮಕ್ಕೆ
ಅರ್ಥ ಪ್ರಾಣಾಭಿಮಾನವ ಕೊಟ್ಟು
ಅಹಂಕಾರವಳಿದಿರುವಂತೆ ಪುರಾತನರ ಮನೆಯಲ್ಲಿ
ಎತ್ತಾಗಿ ಹುಟ್ಟಿಸಯ್ಯಾ, ತೊತ್ತಾಗಿ ಹುಟ್ಟಿಸಯ್ಯಾ,
ಬಾಗಿಲ ಕಾಯ್ದಿಪ್ಪಂತೆ ಸೊಣಗನಾಗಿ ಹುಟ್ಟಿಸಯ್ಯಾ
ಜಂಗಮಲಿಂಗವೇ ಶಿವನೆಂದು ನಂಬಿ ನಮಸ್ಕರಿಸುವ
ಪುರಾತನರ ಮನೆಯ ಬೇಲಿಯಾಗಿ ಹುಟ್ಟಿಸಯ್ಯಾ!
ರಾಮನಾಥ.

೧೧೦

ಸಣ್ಣ ನನೆಯೊಳಗಣ ಪರಿಮಳವ
ಹೊರಸೂಸಿ ಇದಿರಿಂಗೆ ಅರುಹಿಸಬಲ್ಲುದೆ ವಾಯು?
ಕೊಡಗೂಸಿನೊಳಗಣ ಮೊಲೆ- ಮುಡಿಯ
ಹಡೆದ ತಾಯಿ-ತಂದೆಗಳೆಂದಡೆ
ಕಾಣಿಸಿಕೊಡಬಲ್ಲರೆ ಕಾಬವರ ಕಣ್ಣಿಗೆ?
ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ಕಾಣಾ! ರಾಮನಾಥ.

೧೧೧

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷಬೆರೆದಂತೆ ಕಾಣಾ! ರಾಮನಾಥ.

೧೧೨

ಸತಿಯರ ಸಂಗವನು ಅತಿಶಯದ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೆ? ರಾಮನಾಥ.

೧೧೩

ಸರ್ಪನೂ ಕೂರ್ಮನೂ ದಿಕ್ಕರಿಗಳೆಂಟೂ
ಭೂಮಿಯ ಹೊತ್ತಿರ್ದಪರೆಂದು ಅಹರ್ನಿಶಾ
ಹೊತ್ತಿಪ್ಪವರಿಗೇನು ಅತ್ತಲಾಧಾರ ಇತ್ತಲಾಧಾರ?
ಉತ್ತರಗಂಡುವವರಿಗೆ ಇಕ್ಕುವೆ ಮುಂಡಿಗೆಯ
ಎತ್ತುವರುಳ್ಳಡೆ ತೋರಿರೈ ರಾಮನಾಥ.

೧೧೪

ಸಾಗರದೊಳಗಣ ಕಿಚ್ಚಿನ ಸಾಕಾರದಂತೆ
ಸಸಿಯೊಳಗಣ ಫಲಪುಷ್ಪ ರುಚಿಯು ಪರಿಮಳದಂತೆ
ಮನದ ಮರೆಯ ಮಾತು- ನೆನಹಿನಲ್ಲಿ ಅರಿದು
ನಾಲಗೆಯು ನುಡಿವಾಗಲಲ್ಲದೆ
ಕಾಣಬಾರದು, ಕೇಳಬಾರದು
ಒಂದಂಗದೊಳಗಡಗಿದ ನೂರೊಂದರ ಪರಿ, ರಾಮನಾಥ.

೧೧೫

ಹಂದಿ ಶ್ರೀಗಂಧವನೆಂದೂ ಒಲ್ಲದು
ಕುಂದದೆ ಹರಿವುದು ಅಮೇಧ್ಯಕ್ಕೆ
ಶಿವಭಕ್ತನಾಗಿರ್ದು ಹಿಂದ ಬೆರಸಿದಡೆ
ಆ ಹಂದಿಗಿಂದವು ಕರಕಷ್ಟಕಾಣಾ! ರಾಮನಾಥ.

೧೧೬

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ, ಇಂತಾಯಿತ್ತು! ರಾಮನಾಥ.

೧೧೭

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ
ಹಸಿವಿಗ್ನನವನಿಕ್ಕಿ ವಿಷವನಿಳುಹ ಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ! ರಾಮನಾಥ.

೧೧೮

ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ
ಅನೃತದೊಳಗಣ ರುಚಿಯ
ನಾಲಗೆಯ ತುದಿಯಲ್ಲಿ ಅರಿವನ ಚೇತನದಂತೆ
ನಿಲವಿಲ್ಲದ ರೂಪ ಕಳೆಯಲ್ಲಿ ವೇದಿಸುವವನ
ಪರಿ! ರಾಮನಾಥ.

೧೧೯

ಹೆಂಬೇಡಿಗೆ ಹಿಡಿಯಬಹುದೆ ಹೇಳಿಗೆಯೊಳಗಣ ಹಾವ?
ತೊರೆಯಬಹುದೆ? ಹೊನ್ನು ಹೆಣ್ಣು ಮಣ್ಣ
ನಿನ್ನನರಿಯದ ನರಗುರಿಗಳಿಗೆ! ರಾಮನಾಥ.

೧೨೦

ಹೆಣ್ಣ ಕಂಡು ಹೆಚ್ಚಿ ಹೆಕ್ಕಳಬಡುವಂತೆ
ಕಣ್ಣಿಟ್ಟು ನೋಡಿರೋ ಶಿವಲಿಂಗದೇವನ
ಕರಣದಿಬ್ಬೆಗೆ ಹರಿದು, ನರಕದಲ್ಲಿ ನೆರೆದು
ಬರುದೊರೆ ಹೋಗದೆ,
ಮರೆಯದೆ ಪೂಜಿಸಿ ನಮ್ಮ ರಾಮನಾಥನ.

ಶಬ್ದಕೋಶ

[ಆವರಣದಲ್ಲಿರುವ ಸಂಖ್ಯೆಗಳು ವಚನಸಂಖ್ಯೆಯನ್ನು ತಿಳಿಸುತ್ತವೆ]

ಅ

ಅಂಬರ (೧೦, ೧೦೭) = ಆಕಾಶ

ಅಂಬಲಿ (೧) = ಗಂಜಿ

ಅಖಂಡಿತ (೫೩) = ಅಖಂಡ

ಅಘೋರನರಕ (೧೦೦) = (ಟಿಪ್ಪಣಿ ನೋಡಿ)

ಅಜ (೭೬) = ಬ್ರಹ್ಮ

ಅಡಗು (೪,೫) = ಮಾಂಸ

ಅಡಸು (೨೪) = ಸಂಭವಿಸು, ಸಂಭವಿಸುವಂತೆ ಮಾಡು

ಅಡಿಯಿಡು (೨) = ಹಬ್ಬು, ಹೋಗು, ಮುಂದುವರೆ

ಅಣಿ (೨೦) = ಸಜ್ಜಾಗು, ನೇಯ್ಗೆಯ ಮಗ್ಗದ ಹಾಸು ಹೊಕ್ಕುಗಳ ಜೋಡಣೆ

ಅನಳ (೧೮) = ಬೆಂಕಿ

ಅನುಭಾವ (೧೦) ಪರಮಾತ್ಮಜ್ಞಾನ, ಶಿವಾನುಭವ (ಟಿಪ್ಪಣಿ ನೋಡಿ)

ಅಪ್ಪು (೭) = ಸಮರ್ಥವಾಗು, ಶಕ್ತವಾಗು

ಅಮೇಧ್ಯ (೪೧, ೧೧೫) = ಹೇಸಿಗೆ, ಮಲ

ಅಮ್ಮು (೭) = ಸಮರ್ಥವಾಗು, ಶಕ್ತವಾಗು

ಅರವಟಿಗೆ (೩೭) = ಆರ್ದ್ರಪಟ್ಟಿಕಾ (ಸಂ) ಬೇಸಿಗೆಯಲ್ಲಿ ದಾರಿಗರಿಗೆ ನೀರು ಕೊಡುವ ಸ್ಥಾನ

ಅರುಹು (೧೧೦) = ತಿಳಿಸು

ಅರೆಘಳಿಗೆ (೪೬) = ಸ್ವಲ್ಪಹೊತ್ತು ೧೨ ನಿಮಿಷಗಳು, ಘಟಿಕಾ (ಸಂ)= ೨೪ ನಿಮಿಷ

ಅಸ್ತಮಾನ (೩) = ಸಂಜೆ

ಅಹರ್ನಿಶ (೧೧೩) = ಹಗಲೂರಾತ್ರಿ

ಅಳಿಮನ (೧೧೬) = ಹೀನಮನ

ಅಳುಪು (೫೮) = ಆಸೆಪಡು

ಅಳೆ (೧) = ಮಜ್ಜಿಗೆ

ಆ

ಆತ್ಮ (೧೦೨) = (ಟಿಪ್ಪಣಿ ನೋಡಿ)

ಆಪಾದಮಸ್ತಕ (೧೧೭) =ಕಾಲಿನಿಂದ ಹಿಡಿದು ತಲೆಯವರೆಗೆ

ಆರಯ್ (೧೦೦) = ವಿಚಾರಿಸು

ಎ

ಎಡರು (೨೪) = ಕಷ್ಟ

ಎರೆಯ (೧೯) = ಒಡೆಯ

ಐ

ಐದುಭೂತ (೩೧) = ಪಂಚಭೂತ.
ನೆಲ, ನೀರು, ಬೆಂಕಿ, ಗಾಳಿ, ಆಕಾಶ
ಎಂಬ ಐದು ತತ್ವಗಳು

ಒ

ಒಕ್ಕು (೩೨) = ತಿಂದು
ಒಕ್ಕುಡಿತೆ (೭೬) = ಒಂದೇ ಬೊಗಸೆ
ಒಕ್ಕುದು (೯೧) = ಊಟ ಮಾಡಿ ಮಿಕ್ಕುದು
ಒಡತಣ (೮೧) = ಜೊತೆ
ಒಡಲು (೩೩) = ದೇಹ, ಶರೀರ
ಒಡವೆರೆ (೫೪) = ಒಂದಾಗು,
ರತಿಕ್ರೀಡೆಯಲ್ಲಿ ಒಂದಾಗು
ಒಪ್ಪಚ್ಚಿ (೫೫, ೭೫) = ಒಂದು ಸಲ,
ಒಂದು ಭಾಗ, ಸರದಿಯ ಮೇಲೆ
ಒರತೆ (೩೭) = ನೀರಿನ ಸೆಲೆ

ಓ

ಓಜ (೬೪) = ನಾಟ್ಯಾಚಾರ್ಯ,
ಉಪಾಧ್ಯಾಯ

ಕ

ಕಂಚುಗಾರರು (೮೪) ಲೋಹದ
ಪಾತ್ರೆಗಳ ವ್ಯಾಪಾರಿಗಳು, ಕಂಚು
ಲೋಹದ ವಸ್ತುಗಳ ವ್ಯಾಪಾರಿಗಳು
ಕಂಡಿತೆ (೨೦) = ಸೇರೆ
ಕಂಪು (೯೯) = ಗಮಲು, ಸುಗಂಧ
ಕಟಕ (೬೧) = ಕಡಗ, ಚಿನ್ನದ ಬಳೆ
ಕಡೆಗೀಲು (೪೨) = ಕಡಾಣಿ
ಕಣಿಕ (೪) = ಕಲಸಿದ ಗೋಧಿಹಿಟ್ಟು
ಕತ್ತುರಿ (೪೪) = ಕಸ್ತೂರಿ
ಕರಣ (೧೨೦) = ಇಂದ್ರಿಯ
ಕರಸ್ಥಲ (೪೫) = ಅಂಗೈ
ಕರ್ತಾರ (೨೬) ಈಶ್ವರ
ಕರಿ (೪೬) = ಆನೆ
ಕಳ (೪೭) = ಗದ್ದೆ, ರಣರಂಗ
ಕಳವೆ (೧೧೬) = ಬತ್ತ, ಬತ್ತದ ತೆನೆ
ಕರುವಿಡು (೪೫) = ಎರಕ ಹೊಯ್ಯಿ
ಕೀಳು (೪೯) = ಕೆಳಗೆ
ಕುಂಬಿನಿ (೬೩) = ಭೂಮಿ
ಕುಕಿಲಿರಿ (೭೮) = ಕೇಕೆ ಹಾಕು
ಕುರುಹು (೬೯) = ಗುರುತು
ಕುಲಜ (೫೦) = ಶ್ರೇಷ್ಠರು
ಕೈಗಡಿಗೆ (೩೬) = ಮಣ್ಣಿನ ತಂಬಿಗೆ
ಕೊಡಗೂಸು (೧೧೦) = ಕನ್ಯೆ

ಗ

ಗಂಡನುಳ್ಳಮ್ಮ (೫೪) = ಸತಿ, ವಿವಾಹಿತೆ
ಗಾರುಡಿಗ (೧೧೭) = ವಿಷವೈದ್ಯ
ಗ್ರಾಸ (೧೧೨) = ಆಹಾರ, ಊಟ
ಗೋಟಡಿಕೆ (೩೯) = ಬಲಿತು
ಗಟ್ಟಿಯಾದ ಅಡಿಕೆ.
ಗೋಣಿ (೧೧೬) = ಸೆಣಬಿನಿಂದ
ಮಾಡಿದ ಚೀಲ
ಗೋರಿಗೊಳಿಸು (೧೦೦) =
ವಾದ್ಯಗಳನ್ನು ಮೊಳಗಿಸು
ಗೋಸಿ (೯೩) = ಕೌಪೀನ, ಲಂಗೋಟಿ

ಜ

ಜಂಬುಕ (೬೩) = ನರಿ
ಜಗಭರಿತ (೩೧) = ಸರ್ವವ್ಯಾಪಿ

ಜಡರು (೫) = ಸಾಮಾನ್ಯ ಜನರು

ಜಡಿ (೩೩) = ಪರೀಕ್ಷಿಸು, ಗದರಿಸು

ಠ

ಠಾವು (೫೯) = ಜಾಗ, ಸ್ಥಾನ

ಡ

ಡಂಭಕ (೧) = ವಂಚಕ, ಮೋಸಗಾರ

ತ

ತಂತು (೬೧) = ನೂಲು

ತಪ್ಪುಕ (೭೨) = ದ್ರೋಹಿ

ತರ್ಕೈಸಿ (೩೨)= ಆಲಂಗಿಸಿ

ತಳಿಗೆ (೮೪) = ತಟ್ಟೆ

ತ್ರಿಣಯ (೯೫) = ಈಶ್ವರ

ತೀವಿ (೭೦) = ಸಭೆಯನ್ನು ತುಂಬು

ತುಡುಗುಣಿ (೪೧) = ಕಳ್ಳ, ಪುಂಡ

ತುರ್ಯ (ತೂರ್ಯ) (೧೦) = ಜಾಗೃತ, ತುದಿ

ತೃಣ (೨೨) = ಹುಲ್ಲು

ತೊಡಕು (೯೪) = ಸಮಸ್ಯೆ, ತಗುಲಿಕೊ

ತೊಡಚು (೪೦) = ಗಂಟಿಕ್ಕು

ತೊಡಹದ ನಾಯಿ (೪೦) = ಬಣ್ಣದ ಗೊಂಬೆ ನಾಯಿ?

ತೊತ್ತು (೪೪) = ಆಳು, ದಾಸಿ

ತೊರೆಯ (೯) = ಬೆಸ್ತ

ದ

ದಿಂಡುಗೆಡೆ (೫೪) = ಬೀಳು

ದೇಹಾರ (೭೫) = ಪೂಜೆ

ದೊಂಬ (೬೩) = ಗಣೆ ಆಟದವನು

ಧ

ಧರೆ (೮೬) = ಭೂಮಿ

ನ

ನಚ್ಚು (೯೨) = ನಂಬು

ನಟ್ಟಡವಿ (೮೨) = ಕಾಡಿನ ಮಧ್ಯೆ

ನನೆ (೧೧೦) = ಮೊಗ್ಗು

ನಿಗುಚು (೨೦) = ಎಳೆಎಳೆಯಾಗಿ ಎಳೆಯನ್ನು ಬಿಡಿಸು

ನಿಚ್ಚ (೪೦) = ನಿತ್ಯ, ಪ್ರತಿದಿನ

ನಿಡಿದು (೮೧) = ಉದ್ದನೆಯ

ನುಡಿಗಡಣ (೪೨) = ಸೂಳ್ನುಡಿ, ಶರಣರ ಮಾತು

ನೆಲೆಮನೆ (೧೦) = ವಾಸಗೃಹ

ಪ

ಪರುಷ (೫೬) = ಸ್ಪರ್ಶಶಿಲೆ, ಸ್ಪರ್ಶಮಣಿ

ಪ್ರಣವ (೮) = ಓಂಕಾರಮಂತ್ರ, ಒಂದು ಬಗೆ ಚರ್ಮವಾದ್ಯ

ಪ್ರಪಂಚಿ (೯) = ಸಂಸಾರದಲ್ಲಿ ಆಸಕ್ತಿ ಉಳ್ಳವನು

ಪ್ರಪಂಚು (೫೭) = ಜಗತ್ತು

ಪ್ರಸಾದ (೩೨) = ಟಿಪ್ಪಣಿ ನೋಡಿ

ಪಾರದ್ವಾರಿ (೭೨) = ಪರಸತಿಯ ಸಂಪರ್ಕವುಳ್ಳವನು

ಪಾಷಾಣ (೫೬) = ಶಿಲೆ

ಪೊಡೆವಡು (೨೬) = ನಮಸ್ಕರಿಸು, ಬಾಗು, ವಂದಿಸು

ಬ

ಬಯಲು (೧೧) = ಅವಕಾಶ, ಆಕಾಶ, (ಟಿಪ್ಪಣಿ ನೋಡಿ)

ಬರುದೊರೆವೋಗು (೧೨೦)= ವ್ಯರ್ಥವಾಗಿ ಹೋಗು

ಬರುಸಟೆಗ (೮೮) = ಸುಳ್ಳುಗಾರ, ಕಪಟಿ

ಬಸಿರ್ (೧೧೭) = ಹೊಟ್ಟೆ

ಬಿನ್ನಾಣ (೨೯, ೬೭) = ಜ್ಞಾನ, ರೀತಿ, ಹದ, ಸೊಬಗು

ಬಿಬ್ಬನೆ ಬೀಗು (೯೨) = ಅಹಂಕಾರದಿಂದ ಮೆರೆ

ಬೀಸರ (೪೩) = ವ್ಯರ್ಥ

ಬೆಡಗು (೫, ೧೯) = ರಹಸ್ಯ, ಅದ್ಭುತ

ಬೆಳಗೆ (೧೨೦) = ಬಳಕೆಯಾಗದ, ತೊರೆಯದೆ, ಹರಿದು ಹೋಗು

ಬೊಬ್ಬುಳಿ (೩೪) = ನೀರ್ಗುಳ್ಳೆ

ಬೋಗಾರರು (೮೪) = ಲೋಹದ ವ್ಯಾಪಾರಿಗಳು

ಬೋದಿಗೆ (೧೦೭) = ಜಂತೆಗೆ ಬೇಕಾಗುವ ಆಧಾರ

ಬೋನ (೧೯) = ಆಹಾರ

ಭ

ಭಂಡ (೯೩) = ಮಾನಹೀನ, ಸರಕು

ಭವಗೆಡು (೫೭) = ಮುಕ್ತಿಹೊಂದು

ಭಸಿತ (೪) = ವಿಭೂತಿ

ಭುವನ (೮) = ಜಗತ್ತು

ಭೃತ್ಯ (೨೬) = ಸೇವಕ, ಲೆಂಕ

ಮ

ಮಂಡೆ (೯೩) = ತಲೆ

ಮಂದಾಗ್ನಿ (೯೯) = ಶಾಂತಿರೂಪದಲ್ಲಿರುವ ಅಗ್ನಿ

ಮಚ್ಚು (೯೨) = ಮೆಚ್ಚು

ಮಡು (೬) = ಸರೋವರ, ಆಳವಾದ ನೀರಿರುವ ಪ್ರದೇಶ

ಮನೆವಾರೆ (೪೧) = ಮನಸಾರೆ, ಪೂರ್ಣಮನಸ್ಸಿನಿಂದ

ಮರುಜವಣಿ (೫೬) = ಸಂಜೀವಿನಿ

ಮಸಣ (೧೦೦) = ಸ್ಮಶಾನ

ಮಾರ್ಕೊಳ್ (೯೮) = ಪ್ರತಿಭಟಿಸು

ಮುಟ್ಟು (೩೯) = ಉಪಕರಣ

ಮುಂಡಿಗೆ (೧೧೩) = ಬೆಡಗು, ರಹಸ್ಯ, ಸವಾಲು, ಒಗಟು,

ಮೃಡ (೬) = ಈಶ್ವರ

ಮೃಡಶರಣ (೩೬) = ಶಿವಭಕ್ತ

ಮೆಲ್ಲನಾಯಿತ್ತು (೧೩) = ಊಟ ಮಾಡಲಿರುವ ಹಸಿವಿನಂತೆ ಕಡಿಮೆಯಾಗು

ಮೇಲಾಟ (೭೪) = ಒಡನಾಟ

ಮೇಲೋಗರ (೧) = ಅನ್ನದ ಜತೆ ಕಲಸಿಕೊಳ್ಳುವ ಸಾರು, ಹುಳಿ, ಮೊದಲಾದವು, ತರಕಾರಿ ವ್ಯಂಜನ ಪದಾರ್ಥಗಳು

ಮೆಳೆ (೧೦೧) = ಬಿದಿರು

ಯ

ಯಜ್ಞೋಪವೀತ (೯೪) = ಜನಿವಾರ, ಶಿವದಾರ

ಲ

ಲಾಳಿ (೨೦) = ಲಾಳಿ ಮುಳ್ಳು

ಲೆಂಗಿ (೮೭) = ಲೆಂಕ, ಭೃತ್ಯ, ಸೇವಕ, ದಾಸ, ಶರಣ

ಲೋಗ (೧೦೫) = ಲೋಕ, ಸಾಮಾನ್ಯ ಜನ

ವ

ವನಿತೆಯರ ಕೂಟ (೯೬) = ಸ್ತ್ರೀ ಸಮಾಗಮ

ವಸುಧೆ (೧೧೧) = ಭೂಮಿ

ವಾಯು (೧೭) = ಮಾರುತ

ವ್ಹಾರಣಾಸಿ (೩) ಕಾಶಿ

ವಿಪತ್ತು (೨೪) = ತೊಂದರೆ

ವಿಷಯ (೫೭) = ಆಸಕ್ತಿ, ಮೋಹಾಸಕ್ತ

ವೇದಿಸು (೧೧೮) = ತಿಳಿಸು, ನಿವೇದಿಸು

ವೇಶಿ (೧೦೬) = ವೇಶ್ಯೆ, ಸೂಳೆ, ವೇಷ

ಶ

ಶರಧಿ (೧೦೭) = ಸಮುದ್ರ

ಶುನಕ (೯) = ನಾಯಿ

ಸ

ಸಂಗ್ರಾಮ (೭೦) = ಯುದ್ಧ

ಸಸಿ (೧೧೪) = ಗಿಡ, ಚಂದ್ರ, ಶಶಿ

ಸರಿಗೆ (೭೦) = ದಾರ

ಸ್ವಯವಾಗು (೬೩) =ಒಂದಾಗು

ಸಾವರೆ (೭೦) = ಸಾಯುತ್ತಾರೆಯೇ

ಸುರ (೭೬) = ದೇವತೆ

ಸುರಗಿ (೮೦) = ಕತ್ತಿ, ಚೂರಿ

ಸುರೆ (೪, ೭೪) =. ಹೆಂಡ, ಮದ್ಯ

ಸೂಳ್ನುಡಿ (೪೬) = ಸುಭಾಷಿತ, ಸಂಭಾಷಣೆ, ಸತ್ಯವಾಕ್ಯ, ಒಳ್ಳೆಯಮಾತು

ಸ್ಯೆವೆರಗು (೬೩) = ಮಗ್ನನಾಗು, ಮೈಮರೆ, ಸಮಾಧಿಸ್ಥನಾಗು

ಸೊಣಗ (೬೪, ೧೦೯) = ಶುನಕ, ನಾಯಿ

ಸೋಗೆಗ (೬೪) = ವೇಷಧಾರಿ

ಹ

ಹಜ್ಜೆ(೫೧) = ಸಜ್ಜೆ, ಹೆಜ್ಜೆ, ಅಡಿ, ಪದ

ಹಡಿಕೆ (೧೧೫) = ಹೇಸಿಗೆ, ಅಮೇಧ್ಯ

ಹಡ್ಡಿಗರು (೪) = ತುಚ್ಛರು

ಹತ್ತಿಪ್ಪೆ(೧೫) = ಸಾನ್ನಿಧ್ಯದಲ್ಲಿರುವೆ

ಹರಿ (೭೬) = ವಿಷ್ಣು

ಹರೆ (೮೪) = ಹರಡಿದರೆ, ಜಾರಿದರೆ

ಹಾರುವಳು (೧೦) = ನಿರೀಕ್ಷಿಸುವಳು

ಹಿಡಿಗೋಲು (೯೪) = ಸಂಬಳಿಗೋಲು, ಅಂತ್ಯಜನ ಕೈಕೋಲು

ಹಿಳಿಲು (೨೨) = ಹಿಣಿಲು, ಹೆಣೆಯುವಿಕೆ

ಹೀಹಂದಿ (೭೪) = ಹೀನಹಂದಿ

ಹೆಡಗೆ (೫೨) = ಮಂಕರಿ, ಬುಟ್ಟಿ

ಹೆರರು (೧೧೨) = ಅನ್ಯರು

ಹೇಸು (೧೯) = ಅಸಹ್ಯಪಡು

ಹೊಗರು (೯೧) = ಪ್ರವೇಶಿಸುವುದಿಲ್ಲ

ಹೊಡೆಗೆಡು (೪೨) = ನೆಲಕ್ಕೆ ಬೀಳು, ನಮಸ್ಕರಿಸು, ಮುಗ್ಗರಿಸು

ಹೊಲಬು (೪೫, ೯೨) = ಮರ್ಮ, ರೀತಿ, ಕ್ರಮ

ಹೊಸೆ (೮೧) = ಉಜ್ಜು

ಹೊಳ್ಳಕುಟ್ಟಿ (೩೦) = ಹೋಟೆಯಾಗು, ಟೊಳ್ಳಾಗು.

ಟಿಪ್ಪಣಿಗಳು : ಒಂದು

ಪಾರಿಭಾಷಿಕಗಳು

೧. ಕ್ರಿಯಾ-ಜ್ಞಾನ ಭೇದ (ವ-೨)

ಕ್ರಿಯೆಯೇ ಜ್ಞಾನ, ಆ ಜ್ಞಾನವೇ ಕ್ರಿಯೆ. ಜ್ಞಾನವೆಂದರೆ ತಿಳಿಯುವುದು. ಕ್ರಿಯೆಯೆಂದರೆ ತಿಳಿದಂತೆ ಮಾಡುವುದು. ಪರಸ್ತ್ರೀಯನ್ನು ಬಯಸಬಾರದೆಂಬುದು ಜ್ಞಾನ. ಅದರಂತೆ ಆಚರಿಸುವುದು ಕ್ರಿಯೆ. ಹಾಗೆ ಆಚರಿಸದಿದ್ದರೆ ಅದು ಅಜ್ಞಾನ.

೨. ಭವಿ (ವ-೮)

ಭಕ್ತನಲ್ಲದವನು ಭವಿ. ಭಕ್ತನಾದ ಮೇಲೆ ಭವಿಯ ಮನೆಯ ಅನ್ನವನ್ನು ನಾಯಿಯ ಮಾಂಸ, ನರರು ಹೇಸಿದ ಅಮೇಧ್ಯ ಎಂದು ತಿಳಿಯಬೇಕು. ಭವಿಯ ಮನೆಯ ಭೋಜನ ಸವಿಯಾಗಿದೆ ಎಂದು ಉಂಡ ಭಕ್ತನಿಗೆ ಭವಿಪಾಕನರಕ. ಅರಿಷಡ್ವರ್ಗಗಳನ್ನು ಅಂತರಂಗದ ಭವಿಗಳೆಂದು ಚನ್ನಬಸವಣ್ಣ ಕರೆದಿದ್ದಾರೆ.

೩. ಅನುಭಾವ (ವ-೧೦)

ಶಿವಶರಣರು ಬೇರೆ ಬೇರೆ ಅರ್ಥಚ್ಛಾಯೆಗಳಲ್ಲಿ ಅನುಭಾವ ಪದವನ್ನು ಬಳಸಿದ್ದಾರೆ.

i. ಶಿವಜ್ಞಾನಿಗಳ ಅಥವಾ ಪರಮಾತ್ಮನ ಬಗ್ಗೆ ಅರಿವು ಉಳ್ಳವರ ಜೊತೆ ನಡೆಸುವ ಚರ್ಚೆ ಎನ್ನುವ ಅರ್ಥದಲ್ಲಿ ಅನುಭಾವ ಪದದ ಬಳಕೆ ಆಗುತ್ತದೆ (ಜೇಡರ ದಾಸಿಮಯ್ಯ).

ii. ಅನುಭಾವವೆಂಬ ಪದ ಶಿವನೊಡನೆ ಬೆರೆಯುವುದು, ಒಂದಾಗುವುದು ಎಂಬ ಅರ್ಥದಲ್ಲಿಯೂ ಬಳಕೆಗೊಂಡಿದೆ (ಬಸವಣ್ಣ).

iii. ಅನುಭಾವವೆಂಬ ಪದ ಶಿವಜ್ಞಾನ ಅಥವಾ ಶಿವನ ಬಗೆಗಿನ ತಿಳಿವಳಿಕೆ ಎಂಬರ್ಥದಲ್ಲಿಯೂ ಬಳಕೆಗೊಂಡಿದೆ (ಚೆನ್ನಬಸವಣ್ಣ).

iv. ಅನುಭಾವ ಪದವು ಲಿಂಗಾಂಗ ಸಾಮರಸ್ಯ ಎಂಬರ್ಥದಲ್ಲಿಯೂ ಬಳಕೆಗೊಂಡಿದೆ (ಚನ್ನಬಸವಣ್ಣ).

೫. ಪ್ರಕೃತಿ (ವ-೧೨)

"ಸಾಂಖ್ಯಶಾಸ್ತ್ರದಲ್ಲಿ ಪುರುಷ, ಪ್ರಕೃತಿ ಎಂಬ ಶಬ್ದಗಳಿವೆ. ಆದರೆ ಈ ಶಬ್ದಗಳು ಎಂದರೆ (೧) ಪುರುಷ-ಮತ್ತು ಪರಶಿವ (೨) ಪ್ರಕೃತಿ ಮತ್ತು ಅಂಗ ಇವೆರಡೂ ಗುಂಪುಗಳು ಸಮಾನಾರ್ಥವುಳ್ಳವು. ಆದರೆ ಪ್ರಕೃತಿ, ಪುರುಷ ಈ ಶಬ್ದಗಳು ವಚನಗಳಲ್ಲಿ ಆಗಿಂದಾಗ್ಗೆ ಬರುವುದಿಲ್ಲ. ಕ್ವಚಿತ್ತಾಗಿ ಬರುತ್ತವೆ. ಬಸವಣ್ಣ ತನ್ನ ಕೆಲವು ವಚನಗಳಲ್ಲಿ ಪರಮಾತ್ಮನನ್ನು ಪುರುಷ ಎಂಬ ಹೆಸರಿನಿಂದಲೂ ಕರೆದಿದ್ದಾನೆ." (ಫ.ಗು. ಹಳಕಟ್ಟಿ)

೭. ಪ್ರಸಾದ (ವ-೩೨)

ಲಿಂಗಕ್ಕೆ ಅರ್ಪಿಸಿದ ಪದಾರ್ಥವನ್ನು ಸಾಮಾನ್ಯ ಅರ್ಥದಲ್ಲಿ ಪ್ರಸಾದವೆಂದು ಕರೆಯಲಾಗುವುದು. "ಶುದ್ಧ ಪ್ರಸಾದ ಗುರುವಿನದು; ಸಿದ್ಧಪ್ರಸಾದ ಲಿಂಗದದು, ಪ್ರಸಿದ್ಧಪ್ರಸಾದ ಜಂಗಮದದು" (ಬಸವಣ್ಣ). "ಪ್ರಸಾದವೆ ಪರಮಜ್ಞಾನ. ಪರಾಪರ, ಪರಬ್ರಹ್ಮ ಪರಮಾನಂದ, ಗುರುಲಿಂಗಜಂಗಮ" (ಆದಯ್ಯ).

೬. ಸದ್ಭಕ್ತ (ವ-೧೨)

ಧರ್ಮ, ಅರ್ಥ, ಕಾಮ, ಮೋಕ್ಷಗಳಿಲ್ಲದೆ ತನು ಮನ ಧನವನ್ನು ವ್ಯಯಿಸಿ ತನ್ನಲ್ಲಿನ ಆತ್ಮವನ್ನು ತಿಳಿಯುವವನು ಸದ್ಭಕ್ತ. "ಅಂಗವಿಕಾರ ಸಂಗವ ಮರೆದು, ಲಿಂಗವನೊಡಗೂಡುತ್ತಿರುವವರು; ಕಾಮವಿಕಾರ ಕತ್ತಲೆಯಳಿದು ಭಕ್ತಿ ಪ್ರಾಣವಾಗಿರುವವರು; ತ್ರಿಕರಣಶುದ್ಧವಾಗಿ ನಿಮ್ಮನ್ನು ಚೆನ್ನಾಗಿ ನಂಬಿದವರು." ಸದ್ಭಕ್ತರು ಎನ್ನುತ್ತಾಳೆ ಅಕ್ಕ.

೭. ತುರ್ಯ (ತೂರ್ಯ) (ವ. ೧೦)

ನಾಲ್ಕನೆಯ ಅವಸ್ಥೆ; ತುದಿ, ಕೊನೆ. ಪರಮಾತ್ಮನೊಡನೆ ಬೆರೆತು ಒಂದಾಗುವ ಸ್ಥಿತಿ. 'ಬೆಳಗಿನೊಳಗಣ ಮಹಾಬೆಳಗಿನ ಬೆಳಗು' (ಬಸವಣ್ಣ).

೮. ಭಸಿತ (ವ-೪೧)

ಪಂಚಭಸ್ಮಗಳಲ್ಲಿ ಒಂದು. ಇದು ಮನುಷ್ಯನ ಸಕಲ ಆಕಾಂಕ್ಷೆಗಳನ್ನು ಸುಟ್ಟು ನಿಃಕಾಮನನ್ನಾಗಿ ಮಾಡುತ್ತದೆ.

೯. ಕರಸ್ಥಲ (ವ-೪೬)

ಕರಸ್ಥಲದಲ್ಲಿ ಲಿಂಗವನ್ನು ಧರಿಸಿದ ಬಳಿಕ ಲಿಂಗದಲ್ಲಿ ಅನಿಮಿಷ ದೃಷ್ಟಿಯಾಗಿರಬೇಕು, ತನ್ನತಾನೆ ಅನಿಮಿಷನಾಗಿರಬೇಕು. ಜಂಗಮದ ನಿಲುಗಡೆಯನು ತಿಳಿಯಬೇಕು. ಪ್ರಸಾದದಲಿ ಪರಿಪೂರ್ಣನಾಗಿರಬೇಕು. ಹಿರಣ್ಯಕ್ಕೆ · ಕೈ ಚಾಚದಿರಬೇಕು. ತನ್ನ ನಿಲುಗಡೆಯ ತಾನು ತಿಳಿಯಬೇಕು.

೧೦. ಲಿಂಗ (ವ-೬೦)

ಲಿಕಾರವೆ ಶೂನ್ಯ, ಬಿಂದುವೆ ಲೀಲೆ; ಗಕಾರವೇ ಚಿತ್ತು. ಈ ತ್ರಿವಿಧದೊಳಗಿದೆ ಲಿಂಗವೆಂಬ ಸಕೀಲ. ಮುಕ್ತಿಯನ್ನು ಹೊಂದಬೇಕಾದರೆ ಅಂಗದಲ್ಲಿ ಹೆರಹಿಂಗದೆ ಲಿಂಗವನ್ನು ಧರಿಸಬೇಕು. "ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಒಳಗಾಗದ ಲಿಂಗವೆಂಬುದು ಕಲ್ಲು" (ಅಮುಗೆ ರಾಯಮ್ಮ).

೧೧. ಬಯಲು (ವ-೬೧)

ನಿರವಯ, ಶೂನ್ಯ ಎಂದರೂ ಒಂದೇ ಅರ್ಥ. ವಚನಕಾರರು ಜಗತ್ತು ಪ್ರಕಟವಾಗದ ಸ್ಥಿತಿಯನ್ನು ಬಯಲು ಎನ್ನುತ್ತಾರೆ. ಅತ್ಯಂತ ಶಾಂತ-ಸ್ತಬ್ಧಸ್ಥಿತಿ. ಮೊದಲು ಬಯಲು ತರುವಾಯ ಬಯಲಿನೊಳಗಿಂದಲೇ ಜಗತ್ತು ಪ್ರಕಟವಾಗುತ್ತದೆ. ಕಡೆಗೆ ಬಯಲಿನಲ್ಲಿಯೇ ಅದು ಲಯವಾಗುತ್ತದೆ.

೧೨., ಪಂಚಮಹಾಪಾತಕ (ವ-೭೨)

ಪಾತಕವೆಂದರೆ ಘೋರವಾದ ಪಾಪಕರ್ಮ, ಬ್ರಹ್ಮಹತ್ಯೆಗಿಂತ ಭ್ರೂಣಹತ್ಯೆ ಹೆಚ್ಚು ಘೋರವಾದುದು. ಅವೆರಡಕ್ಕಿಂತಲೂ ಅತಿಘೋರವಾದುದು ವೈತರಣಿ. ಆ ಮೂರಕ್ಕೂ ಹೆಚ್ಚು ಘೋರವಾದುಧು ದುರ್ಗತಿ. ಇವೆಲ್ಲಕ್ಕಿಂತಲೂ ಅಧಿಕವಾದುದು ಪಿಂಡಮಹಾ ಪಾತಕವೆಂದು ಬಸವಣ್ಣ ಹೇಳುವನು. ಶಿವಶರಣರ ದೃಷ್ಟಿಯಲ್ಲಿ ಪಂಚಮಹಾಪಾತಕವು ನಿಷೇಧಾತ್ಮಕ ಆಚರಣೆಗಳಿಗೆ ಸಂಬಂಧಿಸಿದುದು. ಇವು ದ್ರೋಹಕಾರ್ಯಗಳು. ಶಿವಶರಣರು ಪಂಚಮಹಾಪಾತಕಗಳನ್ನು ಹೆಸರಿಸುವಾಗ ಒಂದೇ

ರೀತಿಯಲ್ಲಿ ಹೇಳಿಲ್ಲ. ವ್ಯತ್ಯಾಸ ಕಾಣಿಸಿರುವರು. ಅದು ಅವರವರ ದೃಷ್ಟಿ, ವಿಚಾರ. ಉದಾಹರಣೆಗೆ: "ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ ಆಚಾರದ್ರೋಹ, ಪ್ರಸಾದದ್ರೋಹ" - ಇವನ್ನು ಪಂಚಮಹಾಪಾತಕಗಳೆಂದು ಬಸವಣ್ಣ ಹೇಳಿದರೆ, ಆಗಮದ ಅನು, ನಿಯಮದ ಸಂದೇಹ, ಯೋಗದ ಭ್ರಾಂತು, ಕ್ರೀಯಸಂಕಲ್ಪ, ನಷ್ಟದ ಚಿಂತೆ, ಇವು ಪಂಚಮಹಾಪಾತಕಗಳೆಂದು ಸಿದ್ಧರಾಮ ಹೇಳುತ್ತಾನೆ.

೧೩. ದೇಹಾರ (ವ-೭೫)

ವಚನಕಾರರಲ್ಲಿ ದೇಹಾರವು ಇಷ್ಟಲಿಂಗ ಪೂಜೆ ಎನ್ನುವ ಅರ್ಥದಲ್ಲಿಯೇ ಬಳಕೆಗೊಂಡಿದೆ. "ದೇಹಾರಕ್ಕೆ ಆಹಾರವೇ ನಿಚ್ಚಣಿಕೆ; ದೇಹಾರಕ್ಕೆ ಮಾಡುತ್ತ ಅನ್ನವನಿಕ್ಕದಿದ್ದರೆ ಆ ಹರನಿಲ್ಲ. (ಅಂಬಿಗರ ಚೌಡಯ್ಯ)

೧೪. ಗುರು-ಲಿಂಗ-ಜಂಗಮ (ವ-೮೬)

"ನಿತ್ಯ ನಿರಂಜನ ಪರಂಜ್ಯೋತಿ ವಸ್ತುವೆ ಗುರು-ಲಿಂಗ-ಜಂಗಮ ವೆಂದಾಯಿತು. ಉಪದೇಶಕೊಟ್ಟು ಗುರುವಾದ; ಕರಸ್ಥಲಕ್ಕೆ ಬಂದು ಲಿಂಗವಾದ, ಹಸರವಾದ ಪ್ರಪಂಚವಳಿದು ದಾಸೋಹವ ಮಾಡಿಸಿಕೊಂಡು ಜಂಗಮನಾದ; ಇಂತೀ ಗುರು-ಲಿಂಗ-ಜಂಗಮ ಒಂದೆಯಲ್ಲದೆ ಭಿನ್ನವಿಲ್ಲ (ಬಸವಣ್ಣ). ಮೃದು-ರುಚಿ- ರೂಪು ಕೂಡಿ ಸಕ್ಕರೆಯಾಯಿತ್ತು; ಗುರು-ಲಿಂಗ-ಜಂಗಮ ಕೂಡಿ ವಸ್ತುವಾಗಿತ್ತು (ಸಿದ್ಧರಾಮ).

೧೫. ಸದಾಚಾರಿ (ವ-೯೦)

ಅರಿವು ನಾಸ್ತಿಯಾದುದೆ ಗುರು; ಕುರುಹು ನಾಸ್ತಿಯಾದುದೆ ಲಿಂಗ; ಕಾಯಗುಣ ನಾಸ್ತಿಯಾದುದೆ ವಿಭೂತಿ; ಕರಣಗುಣ ನಾಸ್ತಿಯಾದುದೆ ರುದ್ರಾಕ್ಷಿ; ಮರಹು ನಾಸ್ತಿಯಾದುದೆ ಮಂತ್ರ; ಹೀಗೆ ಪಂಚಾಚಾರ ಪ್ರತಿಷ್ಠೆಯುಳ್ಳಾತನೆ ಸದಾಚಾರಿ (ಚೆನ್ನಬಸವಣ್ಣ)

೧೬. ಭೃತ್ಯಾಚಾರಿ (ವ-೯೦)

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರಗಳೇ ಪಂಚಾಚಾರಗಳು. ಭೃತ್ಯಾಚಾರವೆಂದರೆ ಲೆಂಕತನ, ಶಿವಶರಣರೆ ಹಿರಿಯರಾಗಿ

ತಾನೆ ಕಿರಿಯನಾಗಿ ಭಯಭಕ್ತಿಯಿಂದ ಆಚರಿಸುವುದೆ ಭೃತ್ಯಾಚಾರ" (ಬಸವಣ್ಣ). ಭೃತ್ಯಾಚಾರವುಳ್ಳವನೇ ಭೃತ್ಯಾಚಾರಿ. "ಭೃತ್ಯಾಚಾರಿಗಲ್ಲದೆ ಭಕ್ತಾಚಾರವಳವಡದು" (ಬಸವಣ್ಣ).

೧೭. ಜಂಗಮಲಿಂಗ (ವ-೯೦)

ಇದು ಜೀವಾತ್ಮ ಅಂತರಾತ್ಮ ಪರಮಾತ್ಮ ನಿರ್ದೇಶಾಗಮ, ನಿರ್ಭಾವಾಗಮ, ನಷ್ಟಾಗಮ; ಆದಿಪ್ರಸಾದಿ, ಅಂತ್ಯಪ್ರಸಾದಿ, ಸೇವ್ಯಪ್ರಸಾದಿಗಳೆಂದು ಒಂಬತ್ತು ವಿಧ. ಜಂಗಮಲಿಂಗ ತ್ರಿವಿಧವೆಂದು ಚನ್ನಬಸವಣ್ಣ ಹೇಳುವನು: ಸ್ವಯ, ಚರ, ಪರ "ಸ್ವಯವೆಂದಡೆ ತಾನು, ಚರವೆಂದಡೆ ಲಾಂಛನ, ಮುಂತಾಗಿ ಚರಿಸುವುದು, ಪರವೆಂದಡೆ ಅರಿವು ಮುಂತಾಗಿ ಚರಿಸುವುದು."

೧೮. ಅಘೋರನರಕ (ವ-೧೦೦)

ಶಸ್ತ್ರ, ಸಮಾಧಿ, ಜಲ, ತಾಡನ, ದಿಗ್ಬಲಿ, ದಹನ ಈ ಆರರಲ್ಲಿ ಸಾಯುವುದರ ಫಲ. ಇಷ್ಟಲಿಂಗವನ್ನು ಧರಿಸಿದ ಮೇಲೆ ಪುಣ್ಯತೀರ್ಥಗಳಿಗೆ ಹೋಗಬಾರದು. ಹಾಗೆ ಹೋಗುವ ಪಾತಕಿಗಳಿಗೆ ಅಘೋರನರಕ ತಪ್ಪದು ಎಂದು ಚನ್ನಬಸವಣ್ಣ ಹೇಳುವನು.

೧೯. ಆತ್ಮ (ವ-೧೦೨)

ಆತ್ಮನು ಹೆಣ್ಣು ಅಲ್ಲ, ಗಂಡು ಅಲ್ಲ. ಆತನು ಲಿಂಗಾತೀತ ಎಂಬಂತೆಯೇ "ಆತ್ಮನು ವಾಙ್ಮನಕ್ಕಗೋಚರನು, ತತ್ತ್ವಮಸಿ ವಾಕ್ಯದಿಂದತ್ತತ್ತ". ಆತ್ಮವು ಜೀವಾತ್ಮ ಅಂತರಾತ್ಮ ಪರಮಾತ್ಮ ಎಂದು ಮೂರು ರೂಪಗಳಲ್ಲಿ ಕಂಡುಬರುತ್ತದೆ. ದೇಹಭಾವದ ವ್ಯವಹಾರದಿಂದ ತನ್ನ ತಾ ಮರೆದಿರುವ ಆತ್ಮನೇ ಜೀವಾತ್ಮ. ಆ ದೇಹದ ಜಡತ್ವವನ್ನು ಕಂಡು ತಾನಾರು ಎಂದು ಚಿಂತಿಸುವ ಆತ್ಮನೇ ಅಂತರಾತ್ಮ; ತನ್ನ ತತ್ತ್ವವನ್ನರಿತು ಪರತತ್ತ್ವದಲ್ಲಿ ಪರಮಕಾಷ್ಠಯೆನೆಯ್ದಿರುವ ಆತ್ಮನೆ ಪರಮಾತ್ಮ. "ಸದ್ಗುರು ಆತ್ಮನಲ್ಲಿ ಪ್ರಣವ ಪಂಚಾಕ್ಷರಿಯನ್ನು ನಿರವಿಸಿ ಶಿವಾತ್ಮನನ್ನಾಗಿ ಮಾಡುತ್ತಾನೆ. ಆದ್ದರಿಂದ ಅದು ಶುದ್ಧಾತ್ಮವಾಗುತ್ತದೆ' ಹೀಗೆ ಆತ್ಮನ ಲಕ್ಷಣವನ್ನು ವೀರಶೈವಧರ್ಮದಲ್ಲಿ ಶಿವಶರಣರು ಬಗೆಬಗೆಯಾಗಿ ಬಣ್ಣಿಸಿದ್ದಾರೆ.

೨೦. ಮಂತ್ರ (ವ.-೧೦೩)

"ಓಂ ನಮಃ ಶಿವಾಯ ಇದು ಷಡಕ್ಷರಮಂತ್ರವೆಂದು ಹೇಳಲ್ಪಡುತ್ತದೆ. ಮೂಲ ಪ್ರಣಮವನ್ನು ಬಿಟ್ಟು ಉಚ್ಚರಿಸಿದರೆ ಅದು ಪಂಚಾಕ್ಷರೀಮಂತ್ರವೆನಿಸಿಕೊಳ್ಳುತ್ತದೆ. ಓಂಕಾರವು ಅವ್ಯಕ್ತವಾದುದು. ಆದರೂ ಅದರ ಭಾರವನ್ನಿಟ್ಟುಕೊಂಡು ಅದನ್ನು ಉಚ್ಚರಿಸಿದ್ದಲ್ಲಿ ಅದು ಷಡಕ್ಷರಮಂತ್ರವಾಗುವುದು" (ಫ.ಗು. ಹಳಕಟ್ಟಿ). ದುರಿತ, ಅನ್ಯಾಯಗಳನ್ನು ಪರಿಹರಿಸಬಲ್ಲಡೆ "ಓಂ ನಮಃ ಶಿವಾಯ ಶರಣೆಂಬುದೆ ಮಂತ್ರ" (ಅಕ್ಕ). ಈ ಷಡಕ್ಷರ ಮಂತ್ರವನ್ನು ಮೀರಲು ವೇದಶಾಸ್ತ್ರ, ತರ್ಕಗಳು ಸಾಧ್ಯವಾಗದೆ ನಿಂದವು (ಬಸವಣ್ಣ).

೨೧. ಕೈಲಾಸ (ವ-೧೦೪)

"ಶಿವಶರಣರ ಪಾಲಿಗೆ ಕೈಲಾಸವೆನ್ನುವುದು ವ್ಯಕ್ತಿಯ ಬದುಕಿನ ಪರಮಗಮ್ಯಸ್ಥಾನವಲ್ಲ. ಅದು ಪುರಾತನರಿಗೆ ಸದಾಚಾರದಿಂದ ವರ್ತಿಸಿ, ಲಿಂಗಾಂಗ ಸಾಮರಸ್ಯ ತಿಳಿದು, ಪರಮಾತ್ಮನ ಪಾದ ಪದ್ಮದಲ್ಲಿ ಬಯಲಾಗುವ ಸ್ಥಲ." ಬೇರೆಬೇರೆ ಅರ್ಥದಲ್ಲೂ ಈ ಪದವನ್ನು ಶಿವಶರಣರು ತಮ್ಮ ವಚನಗಳಲ್ಲಿ ಬಳಸಿದ್ದಾರೆ. "ಸಂಗನಶರಣರ ಕಾಯವೆ ಕೈಲಾಸ" (ಬಸವಣ್ಣ) "ಆಚಾರಕ್ಕೆ ಅನುಸರಣೆಯಿಲ್ಲದೆ ನೇಮಕ್ಕೆ ಕುಟಿಲವಿಲ್ಲದೆ ನಿಂದ ಸದ್ಭಕ್ತನ ಬಾಗಿಲ ಬಚ್ಚಲ ಕಲ್ಲೆ ಎನಗೆ ನಿಶ್ಚಯ ಕೈಲಾಸ" (ಮೋಳಿಗಯ್ಯ).

ಆಕರ ಗ್ರಂಥ : **ವಚನ ಪರಿಭಾಷಾಕೋಶ**
ಸಂ: ಡಾ॥ ಎಸ್. ವಿದ್ಯಾಶಂಕರ

ಟಿಪ್ಪಣಿಗಳು : ಎರಡು

ವ್ಯಕ್ತಿಗಳು

೧. ಡೋಹರ ಕಕ್ಕಯ್ಯ (ವ-೪೯)

ಚರ್ಮದ ಕಾಯಕದ ಕಕ್ಕಯ್ಯ ಬಸವಣ್ಣನವರಿಂದ ಸ್ತುತಿಸಲ್ಪಟ್ಟ ಶಿವಶರಣ. ಒಮ್ಮೆ ಬಸವಣ್ಣನವರನ್ನು ಕಕ್ಕಯ್ಯನ ಸತಿ ಪ್ರಸಾದ ಸ್ವೀಕರಿಸಲು ಆಹ್ವಾನಿಸಿದಾಗ ಕಾರ್ಯದ ಅವಸರದಿಂದ ಆಮೇಲೆ ಬರುವುದಾಗಿ ತಿಳಿಸಿ ಹೋದರು. ಅನಂತರ ಬಸವಣ್ಣನವರು ಬಂದಾಗ ಕಕ್ಕಯ್ಯ ಪ್ರಸಾದಕ್ಕಿಂತ ಇವರಿಗೆ ರಾಜ್ಯಕಾರ್ಯಭಾರವೇ ಹೆಚ್ಚಾಯಿತು ಎಂದು ಭಾವಿಸಿ ಅವರಿಗೆ ಪ್ರಸಾದ ನೀಡಲಿಲ್ಲ. ಪ್ರಸಾದವನ್ನು ಪಡೆಯದೇ ಹೋಗಬಾರದೆಂದು ಬಸವಣ್ಣನವರು ಅವರ ಮನೆಬಾಗಿಲನ್ನು ಪ್ರವೇಶಕ್ಕಾಗಿ ಕಾಯುತ್ತಿದ್ದಾಗ ಕೊನೆಗೆ ಇರುವೆಯೊಂದು ಕಕ್ಕಯ್ಯನ ಮನೆಯಿಂದ ಹೊತ್ತುತಂದ ಅನ್ನದ ಅಗುಳನ್ನೇ ಪ್ರಸಾದವೆಂದು ಭಾವಿಸಿ ಅದನ್ನು ಶಿವಪೂಜೆಯ ನಂತರ ಸ್ವೀಕರಿಸಲು ಮನೆಗೆ ತಂದರು. ಅದನ್ನು ಅಕ್ಕನಾಗಮ್ಮ ಸ್ವೀಕರಿಸಿಬಿಟ್ಟಳು. ಮಹಿಮಾವಂತ ಚೆನ್ನಬಸವಣ್ಣ ಪ್ರಾದುರ್ಭವಿಸಿದನು. ಡೋಹರ ಕಕ್ಕಯ್ಯನ ಪ್ರಸಾದಮಹಿಮೆ ಲೋಕಕ್ಕೆ ತಿಳಿಯಿತು.

೨. ಮಾದಾರಚೆನ್ನ (ವ-೪೯)

(ವಚನ ೭೮ ನಂಬಿದ ಚೆನ್ನನ ಅಂಬಲಿಯನುಂಡ)

ಗುರುಭಕ್ತನಾದ ಮಾದರ ಚೆನ್ನಯ್ಯ ಕರಿಕಾಲ ಚೋಳನ ಕುದುರೆಗಳಿಗೆ ಹುಲ್ಲು ತಂದೊದಗಿಸುವ ಕಾಯಕ ಮಾಡುತ್ತಿದ್ದನು. ಈತನ ಭಕ್ತಿಯನ್ನು ಮೆಚ್ಚಿ ಕರಿಕಾಲಚೋಳನು ನಿತ್ಯವೂ ಸಲ್ಲಿಸುತ್ತಿದ್ದ ಆರೋಗಣೆ ಸ್ವೀಕರಿಸದೆ ಚೆನ್ನಯ್ಯ ನೀಡಿದ ಅಂಬಲಿಯನ್ನು ಸ್ವೀಕರಿಸಿ ಸಂತೃಪ್ತನಾದನು.

೩. ಒಹಿಲದೇವ (ವ-೪೯)

ಅರುವತ್ತಮೂರು ಪುರಾತನರಲ್ಲಿ ಒಬ್ಬ ಈತ. ಪರಮಶಿವಭಕ್ತ. ತಂದೆ ಮರಣ ಹೊಂದಿದಾಗ, ಸೌರಾಷ್ಟ್ರದ ಸೋಮನಾಥನನ್ನು ಮರೆಹೊಕ್ಕನು. ಗುಗ್ಗುಲದಿಂದ ಸೋಮನಾಥನನ್ನು ಆರಾಧಿಸುತ್ತಿದ್ದಾಗ ಶಿವನಿಂದ ಪರೀಕ್ಷೆಗೆ ಒಳಗಾಗಿ ಪೂಜೆಗೆ ಗುಗ್ಗುಳವಿಲ್ಲದ ಸಂದರ್ಭ ಬಂದಾಗ ತನ್ನನ್ನೇ ಅರ್ಪಿಸಿಕೊಂಡು ಶಿವನನ್ನು ಮೆಚ್ಚಿಸಿದ ಭಕ್ತನು.

೪. ಉದ್ಭಟಯ್ಯ (ವ-೪೯)

ಒಬ್ಬ ಶಿವಭಕ್ತ ತನ್ನ ಹೆಂಡತಿಯೊಡನೆ ಪಗಡೆ ಆಡುತ್ತಿದ್ದಾಗ ಇದ್ದಕ್ಕಿದ್ದಂತೆ ನಕ್ಕುಬಿಟ್ಟ. ವಿನಾಕಾರಣ ನಕ್ಕಿದ್ದನ್ನು ಕಂಡು ಅಚ್ಚರಿಪಟ್ಟ ಹೆಂಡತಿ ಗಂಡನನ್ನು ನಕ್ಕಿದ್ದೇಕೆ ಎಂದು ಪ್ರಶ್ನೆಮಾಡಿದಳು. ಅದಕ್ಕೆ ಶಿವಭಕ್ತ ಒಹಿಲಯ್ಯನ ನೆನಪಾಯ್ತು. ಅವನು ಒಬ್ಬನೇ ಒಂಟಿಯಾಗಿ ಕೈಲಾಸಕ್ಕೆ ಹೋದನಲ್ಲ ಅದಕ್ಕಾಗಿ ಎಂದ. ಉಳಿದವರಿಗೆ ಆ ಭಾಗ್ಯ ದೊರಕಿಸದೆ, ತನಗಾರೂ ಇಲ್ಲವೆಂಬಂತೆ ತಾನೊಬ್ಬನೇ ಹೋದನಲ್ಲ ಅದಕ್ಕೆ ನಗುಬಂತು ಎಂದನು ಉದ್ಭಟಯ್ಯ. ಅದಕ್ಕೆ ಸತೀಮಣಿ ಹಂಗಾದರೆ ನೀವು ಇಡೀ ನಗರವನ್ನೇ ನಿಮ್ಮ ಜತೆ ಕೈಲಾಸಕ್ಕೆ ಕರದೊಯ್ದು ಬಿಡುವಿರಾ? ನಗುವುದಕ್ಕೇನು ಕಷ್ಟ ಎಂದು ವ್ಯಂಗ್ಯವಾಡಿದಳು. ಆಗ ತನ್ನ ಹೆಂಡತಿಯ ಮಾತನ್ನು ಸವಾಲಾಗಿ ಸ್ವೀಕರಿಸಿ ತನ್ನ ಸ್ತೋತ್ರಬಲದಿಂದ ಹಾಗೂ ಶ್ರದ್ಧಾಭಕ್ತಿಗಳ ಸಾಮರ್ಥ್ಯದಿಂದ ತಾನಿದ್ದ ಶಿವಪುರವನ್ನೇ ತನ್ನೊಂದಿಗೆ ಕೈಲಾಸಕ್ಕೆ ಒಯ್ದ. ಅಂಥ ಮಹಾಮಹಿಮನ ಸಮಾನ ಯಾರಿದ್ದಾರೆ. ಅಂಥ ಶರಣನನ್ನು 'ಕೀಳು' ಎಂದು ಭಾವಿಸಲಾಗದು.

೫. ಕೆಂಭಾವಿ ಭೋಗಯ್ಯ (ವ-೭೮) (ಕೆಂಭಾವಿ ಭೋಗಯ್ಯನ ಹಿಂದಾಡಿ ಹೋದ)

ಕೆಂಭಾವಿ ಎಂಬ ಊರಲ್ಲಿ ಭೋಗಯ್ಯ ಎಂಬ ಶಿವಭಕ್ತನಿದ್ದನು. ಅವನ ಗುರು ಲಿಂಗ ಜಂಗಮ ಭಕ್ತಿಯನ್ನು ಲೋಕಕ್ಕೆ ಸಾರುವ ಉದ್ದೇಶದಿಂದ ಶಿವನು ಕಪಟ ಭಕ್ತವೇಷದಿಂದ ಬಂದು ಸತ್ತ ಕರುವನ್ನು ತಂದು ಇದರಲ್ಲಿ ಪಾಕಮಾಡಿ ಊಟವಿಕ್ಕಬೇಕೆಂದಾಗ, ಆ ಮಾರುವೇಷದ ಶಿವನಿಗೆ ಅದೇ ರೀತಿ ಸತ್ಕರಿಸಿದನು. ಈ ಸುದ್ದಿಯನ್ನು ಜನರಿಂದ ಕೇಳಿ ಊರಿನ ದೊರೆ ಕರೆಸಿ ಹೀಗೇಕೆ ಮಾಡಿದೆ

ಎಂದು ಕೇಳಿದಾಗ ಭೋಗಯ್ಯ ಕೊಟ್ಟ ಉತ್ತರದಿಂದ ಕೋಪಗೊಂಡ ದೊರೆ ಅವನನ್ನು ಊರಿನಿಂದ ಹೊರಹಾಕಿಸಿದ. ಭೋಗಯ್ಯ ಊರು ಬಿಟ್ಟು ಹೊರಟಾಗ ಅವನ ಹಿಂದೆಯೇ ಊರಿನ ಎಲ್ಲ ಶಿವದೇವಾಲಯಗಳ ಶಿವಲಿಂಗಗಳೂ ಹೊರಟವು. ಗುಡಿಗಳಲ್ಲಿ ಖಾಲಿ ಪೀಠಗಳು ಉಳಿದವು. ಎಲ್ಲವೂ ದೇವರಿಲ್ಲದ ಗುಡಿಗಳಾದವು. ಆಗ ಜನಗಳ ಕೋರಿಕೆ ಮೇರೆಗೆ ದೊರೆ ಚಂದಿಮರಸ ಪರಿವಾರದೊಂದಿಗೆ ಹೋಗಿ ಭೋಗಯ್ಯನಲ್ಲಿ ಕ್ಷಮೆ ಕೇಳಿ ಅವನನ್ನು ಹಿಂದಕ್ಕೆ ಕರೆಸಿಕೊಂಡನು.

೬. ಕುಂಬರ ಗುಂಡಯ್ಯ (ವಚನ-೭೮) (ಕುಂಭದ ಗತಿಗೆ ಕುಕಿಲಿರಿದು ಕರೆದ)

ಭಲ್ಲುಕೆ ಗ್ರಾಮದಲ್ಲಿ ಘಟಕಾಯಕದಲ್ಲಿ ನಿರತನಾದ ಗುಂಡಯ್ಯನೆಂಬ ಶಿವಭಕ್ತನಿದ್ದನು. ಅವನು ತನ್ನ ಕಾಯಕವನ್ನೇ ಶಿವಪೂಜೆ ಎಂದು ತಿಳಿದಿದ್ದನು. ಅವನ 'ಮನದೊಳ್, ಕಣ್ಣೊಳ್ ಪೂಜಾಭಾವ' ಸದಾ ತುಂಬಿರುತ್ತಿತ್ತು. ತಾನು ತಯಾರಿಸಿದ ಘಟ (ಮಡಕೆ) ಗಳನ್ನೆ ಬಾರಿಸುತ್ತ ರಾತ್ರಿಯೆಲ್ಲ ಶಿವಧ್ಯಾನದಲ್ಲಿರುತ್ತಿದ್ದ. ಗುಂಡಯ್ಯನ ಭಕ್ತಿಗೆ ಶಿವ ಮಾರುಹೋದನು. ಹರ ಪರವಶವಾಗಿ ಗುಂಡಯ್ಯನ ಘಟದ ವಾದನಕ್ಕೆ ತಕ್ಕಂತೆ ಕುಣಿಯತೊಡಗಿದನು, ಇವರಿಬ್ಬರ ಭಕ್ತಿಯಿಂದ ನರ್ತನ-ನಾದನಗಳನ್ನು ಕಂಡು ಲೋಕವೇ ಕುಣಿದಾಡುತ್ತಾ ನಲಿಯತೊಡಗುತ್ತದೆ. ಲೋಕವನ್ನೇ ಕುಣಿಸುವ ಹರನನ್ನೇ ಕುಣಿಸಿದ ಮಹಾನರ ಶಿವಭಕ್ತ ಗುಂಡಯ್ಯ.


೭. ಚೊಕ್ಕ ನಾಯನಾರ್ (ವ-೮೫) (ನೆರೆನಂಬಿ ಕರೆದರೆ ನರಿ ಕುದುರೆಯಾಗಿ ಹರಿಯದೆ)

ತಮಿಳುದೇಶದಲ್ಲಿ ಶೈವಧರ್ಮದ ಮುಖ್ಯದಲ್ಲಿ ಒಬ್ಬರಾದ ಚೊಕ್ಕ ನಾಯನಾರ್ ಅವರು ಮಧುರೆಯ ದೊರೆಯಾದ ಪಾಂಡ್ಯನಲ್ಲಿ ಮಂತ್ರಿಯಾಗಿದ್ದರು. ರಾಜ್ಯದ ಸೇನೆಗಾಗಿ ಕುದುರೆಗಳನ್ನು ಕೊಂಡುಬರಲು ಅಪಾರ ದ್ರವ್ಯವನ್ನು ತೆಗೆದುಕೊಂಡು ಹೊರಟಾಗ ದಾರಿಯಲ್ಲಿ ಜಂಗಮನೊಬ್ಬ ಎದುರಾದನು. ಜಂಗಮಭಕ್ತಿಯಲ್ಲಿ ಶ್ರದ್ಧಾಭಕ್ತಿಗಳಿದ್ದ ಇವರು ಅವರನ್ನು ಆದರಪೂರ್ವಕವಾಗಿ ಸತ್ಕರಿಸಿದರು. ಆಗ ಆ ಜಂಗಮ ಇವರಲ್ಲಿದ್ದ ಅಪಾರದ್ರವ್ಯವನ್ನು ಅಪೇಕ್ಷಿಸಿದಾಗ ಎಲ್ಲವನ್ನು ಹಿಂದುಮುಂದೆ ನೋಡದೆ ಆತನಿಗೆ ಸಲ್ಲಿಸಿದರು. ಅರಮನೆಗೆ ಹೋಗದೆ ಮನೆಗೆ ಹಿಂತಿರುಗಿದರು.

ಕುದುರೆಗಳೂ ಬಾರದೆ ಮಂತ್ರಿಯೂ ಬಾರದೆ ಇದ್ದುದ್ದು ಕಂಡು ರಾಜನಿಂದ ಇವರಿಗೆ ಕರೆಬಂದಿತು. ಆ ವೇಳೆಗೆ ಅವರ ಮೇಲೆ ದ್ರವ್ಯಾಪಹಾರದ ದೂರನ್ನು ಲಾವಕರು ಹೊರೆಸಿದ್ದನು. ಆ ಸಂದರ್ಭದಲ್ಲಿ ಶಿವಧ್ಯಾನದಿಂದ ಅರಮನೆಯ ಲಾಯದಲ್ಲಿ ನರಿವಿಂಡುಗಳನ್ನು ತಂದೊಟ್ಟಿ ಅವುಗಳನ್ನು ಕುದುರೆಗಳನ್ನಾಗಿ ಮಾಡಿ ಪವಾಡ ಮೆರೆದ ಮಹಾಪುರುಷರು. ಚೊಕ್ಕ ನಾಯನಾರ್. ಜೇಡರ ದಾಸಿಮಯ್ಯ ಈ ಪ್ರಸಂಗವನ್ನೇ ಮೇಲ್ಕಂಡ ಸಾಲಿನಲ್ಲಿ ಸೂಚಿಸಿದ್ದಾನೆ.

೮. ಕೊಂಡುಗುಳಿ ಕೇಶಿರಾಜ (ವ-೮೫ ತೊರೆಯೊಳಗೆ ಬಿದ್ದ ಲಿಂಗ ಕರೆದರೆ ಬಂತು ಕರಸ್ಥಲಕ್ಕೆ)

ಪರಮಶಿವಭಕ್ತನಾದ ಕೊಂಡುಗುಳಿ ಕೇಶಿರಾಜ ಚಾಲುಕ್ಯದೊರೆ ವಿಕ್ರಮಾದಿತ್ಯ (ಪೆರ್ಮಾಡಿ) ಹತ್ತಿರ ಮಹಾಮಂತ್ರಿ ಆಗಿದ್ದರು. ಒಮ್ಮೆ ಪ್ರವಾಸ ಮಾಡುತ್ತಿದ್ದಾಗ ಶಿವಪೂಜಾವೇಳೆ ಬಂದಾಗ ನದಿಯ ದಡವೊಂದರಲ್ಲಿ ಲಿಂಗಪೂಜೆ ಮಾಡುತ್ತ ಕೆಂಪು ದಾಸವಾಳದಿಂದ ಲಿಂಗವನ್ನು ಅಲಂಕರಿಸಿದ್ದ. ಆಕಾಶದಲ್ಲಿ ಹಾರುತ್ತಿದ್ದ ಗರುಡಪಕ್ಷಿ ಮಾಂಸದ ತುಣುಕೆಂದು ಭಾವಿಸಿ, ಆ ಹೂ ಮತ್ತು ಲಿಂಗವನ್ನು ಕಚ್ಚಿಕೊಂಡು ಹಾರುತ್ತಾ ನದಿಯಲ್ಲಿ ಹಾಕಿಬಿಟ್ಟಿತು. ಆಗ ಕೊಂಡುಗುಳಿ ಕೇಶಿರಾಜ ತನ್ನ ಭಕ್ತಿಯ ಬಲದಿಂದ ಆ ಇಷ್ಟಲಿಂಗವನ್ನು ತನ್ನ ಕರಸ್ಥಲಕ್ಕೆ ಬರಮಾಡಿಕೊಂಡ.



ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು